
# ಅಪರಂಜಿ

ತಿಳಿನಗೆಯ ಕಾರಂಜಿ

ಮೇ 2018




ಬಿಡಿ ಪ್ರತಿ: ರೂ.10.00

## ಸಂಪಾದಕ ಮಂಡಳಿ

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

## ಆಡಳಿತ ಮಂಡಳಿ

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.




# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 35**

**ಸಂಚಿಕೆ - 8**

**ಮೇ - 2018**


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಅಪರಂಜಿ 34ರ ಹಬ್ಬದ ಸಂಭ್ರಮ | | 3 |
| ನಮ್ಮ ನಮ್ಮಲ್ಲಿ | ಶಿವಕುಮಾರ್ | 4 |
| ಏಕೆ ಇಷ್ಟು ಶ್ರಮ? | ಸಂದೀಪ್ ಶಾಸ್ತ್ರಿ | 7 |
| ಸೀದಾಸಾದಾ ವ್ಯಂಗ್ಯಚಿತ್ರ–ಖಾರ | ಪ್ರಕಾಶ್ ಶೆಟ್ಟಿ | 8 |
| ನಿರುತ್ತರೆ ! | ಶಾಂತರಾಜ ಐತಾಳ್ | 10 |
| ನನ್ನ ರಿಟೈರ್‌ಮೆಂಟ್ ಪ್ಲಾನ್ | ಮಾಲತಿ ಮುದಕವಿ | 14 |
| ಡಾ. ಪ್ರಭುಶಂಕರ ಅವರಿಗೆ ಅಶ್ರುತರ್ಪಣ | | 19 |
| ತುಂತುರು | ದಂನಅ | 22 |
| ಪುಸ್ತಕ ಪರಿಚಯ | ಶ್ರೀನಿವಾಸ ವೈದ್ಯ | 23 |
| ಮೊನ್ನೆ ಹೀಗಾಯಿತು.. | ಎಚ್. ಗೋಪಾಲಕೃಷ್ಣ | 25 |
| ಕಂತು ಪಿತ | ವೈ.ವಿ.ಗುಂಡೂರಾವ್ | 29 |
| ಕುರಿಯ ಪ್ರಲಾಪ | ನಂನಾಗ್ರಾಜ್ | 35 |
| ಧರ್ಮ ಸಂಕಟ | ಗಣೇಶ್ ಹೆಗ್ಗಡೆ | 38 |


ಮುಖಪುಟ ವ್ಯಂಗ್ಯಚಿತ್ರ - **ಜಿ.ಎಸ್. ನಾಗನಾಥ್**


ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com ದೂರವಾಣಿ: 080-23345259

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● **ಪ್ರಕಾಶ್**



ಸುಪ್ರೀಂ ಕೋರ್ಟ್ ತೀರ್ಪು ಪೂರ್ವಗ್ರಹ –ಶೀರ್ಷಿಕೆ

**ಸಧ್ಯ, ಇದು ಕನ್ನಡದಲ್ಲಿದೆಯಲ್ಲ!!**

'ಬಿ.ಜೆ.ಪಿ. ನಾಯಕರ ವಿರುದ್ಧ ಮಾನನಷ್ಟ ಮೊಕದ್ದಮೆ'

–ಸುದ್ದಿ

**ಚುನಾವಣೆ ಕಾಲದಲ್ಲಿ 'ಮಾನ' ಎಂದರೇನು?**

**ಎಂದು ಅಪರಂಜಿ ಪಲುಕಿದಳಂತೆ!!**

'ಐವರು ಸಂತರಿಗೆ ರಾಜ್ಯ ಸಚಿವ ಸ್ಥಾನ' –ಇಂದೋರ್ ಸುದ್ದಿ

**ನರ್ಮದೆ ಕಣ್ಣೀರು ಸುರಿಸಿದಳಂತೆ!!**

'ಅಮೆರಿಕದ ಸರಕಿಗೆ ಚೀನಾದ ಹೊಸ ನಿರ್ಬಂಧ' – ಸುದ್ದಿ

**ದೇಶಗಳ ಜಗಳದಲ್ಲಿ ಮಾಲ್‌ಗಳ ಮಾಲುಗಳು**

**ಬಡವಾದವಂತೆ!!**

ಕೆ.ಪಿ.ಎಸ್.ಸಿ.ಗೆ ಕಾಯಕಲ್ಪ ಕಲ್ಪಿಸೋರು ಯಾರು?

**ಪ್ರಶ್ನೆ : 'ಕಾಯ'ವೇ ಶಿಥಿಲವಾದಾಗ ಕಲ್ಪವೆಲ್ಲಿ ಬರುತ್ತೆ!!**

ಚುನಾವಣಾ ಹಣ ದುರ್ಬಳಕೆಗೆ ತಡೆಹಾಕಲು ಹದ್ದಿನ ಕಣ್ಣು

–ಹೇಳಿಕೆ

**ಹದ್ದುಗಳು ನಾಚಿ ತಲೆತಗ್ಗಿಸಿದವಂತೆ!!!**

**ಟಿ. ಟ್ವೆಂಟಿ ಪಂದ್ಯಗಳಲ್ಲಿ ರನ್ನುಗಳಿಗಿಂತ**

**ಹಣದ ಮಹಾಪೂರವೇ ಹರಿಯುತ್ತಿದೆ!!**

# ಅಪರಂಜಿ 34ರ ಹಬ್ಬದ ಸಂಭ್ರಮ

ಎಂದಿನ ವರ್ಷಗಳಂತೆ ಅಪರಂಜಿ ತನ್ನ 34ರ ಹಬ್ಬವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿಕೊಂಡಳು. ಏಪ್ರಿಲ್ ಒಂದರಂದು ಭಾರತೀಯ ವಿದ್ಯಾಭವನದಲ್ಲಿ ನಡೆದ ಹಬ್ಬ ಸಂಬ್ರಮ ತುಂಬಿಕೊಂಡಿತ್ತು. ಅಪರಂಜಿಯ ಅಭಿಮಾನಿಗಳು ಬೆಳಗಿನಿಂದಲೇ ಬಂದು ಸಂಭ್ರಮಿಸಿದರು.

ಶಿವಕುಮಾರ್ ಕೊರವಂಜಿ ಅಪರಂಜಿ ಪರಂಪರೆಯ ನಡೆದು ಬಂದ ದಿನಗಳನ್ನು ವೀಡಿಯೋ ಚಿತ್ರಗಳ ಮೂಲಕ ವಿವರಿಸಿದ್ದು ಎಲ್ಲರನ್ನೂ ಬಹಳವಾಗಿ ಆಕರ್ಷಿಸಿತು. ಅಪರಂಜಿಯ ಆರಂಭದ ದಿನಗಳಿಂದಲೂ ಕಿಡಿ ಅಂಕಣ ಬರೆಯುತ್ತಿರುವ ಡಾ. ಓಂಪ್ರಕಾಶ್ ಕಿಡಿ ನಡೆದು ಬಂದ ದಾರಿಯನ್ನೂ ವ್ಯಂಗ್ಯ ಚಿತ್ರಗಳ ಮೂಲಕ ವಿವರಿಸಿದರು. ಈ ಎರಡೂ ಕಾರ್ಯಕ್ರಮ ಅಪರಂಜಿ ಹಬ್ಬದ ವೈಶಿಷ್ಟ್ಯವಾಗಿತ್ತು.

ಅಪರಂಜಿ ಏಪ್ರಿಲ್ ವಿಶೇಷಾಂಕ, ಬೇಲೂರು ರಾಮಮೂರ್ತಿಯವರ ಸಮಗ್ರ ಹಾಸ್ಯ, ಮತ್ತು ಆನಂದ ಅವರ ತುಂತುರು ಕೃತಿಗಳನ್ನು ಡಾ. ಡಿ.ವಿ. ಗುರುಪ್ರಸಾದ್ ಅವರು ಲೋಕಾರ್ಪಣೆ ಮಾಡಿದರು.

ಮುಖ್ಯ ಅತಿಥಿಗಳಾಗಿದ್ದ ಶ್ರೀ ಶ್ರೀನಿವಾಸ ವೈದ್ಯ ಅಪರಂಜಿಯೊಂದಿಗಿನ ಅವರ ನಂಟನ್ನೂ, ಹಾಸ್ಯದ ಅಂದಿನ ಮತ್ತು ಇಂದಿನ ಬಗೆಯನ್ನೂ ವಿಸ್ತಾರವಾಗಿ ತಮ್ಮದೇ ಶೈಲಿಯಲ್ಲಿ ಪ್ರಸ್ತುತಪಡಿಸಿದರು. ಇನ್ನೋರ್ವ ಅತಿಥಿ ಡಾ. ಡಿ. ವಿ. ಗುರುಪ್ರಸಾದ್ ಅವರು ವೈದ್ಯಕೀಯ ರಂಗದಲ್ಲಿ ಕಂಡುಬರುವಂಥ ಹಾಸ್ಯ ಪ್ರಸಂಗಗಳನ್ನು ವಿವರಿಸಿದರು.

ತಮ್ಮ ಬದುಕಿನೊಂದಿಗೆ ಅಪರಂಜಿ ಬೆಸೆದುಕೊಂಡಿರುವುದನ್ನು ಮಧುರವಾಗಿ ಸ್ಮರಿಸಿಕೊಂಡವರು ಶ್ರೀಮತಿ ಭುವನೇಶ್ವರಿ ಹೆಗಡೆ, ಶ್ರೀಮತಿ ವಾಣಿ ಸುರೇಶ್, ಶ್ರೀಮತಿ ಸಹನಾ ಪ್ರಸಾದ್, ಶ್ರೀಮತಿ ಕುಮುದ ಪುರುಷೋತ್ತಮ್, ಶ್ರೀಮತಿ ಶ್ಯಾಮಲಾ ಶಿವಶಂಕರ್. ವೈ. ವಿ. ಗುಂಡೂರಾವ್ ಅವರಿಂದ ಹಾಸ್ಯದ ಮಧುರ ಗೀತೆಗಳ ನಂತರ ಪ್ರಕಾಶ್ ಶೆಟ್ಟಿ ಅವರು ತಮ್ಮ ಕೈ ಚಳಕದಿಂದ ಮೂಡಿಬಂದ ವ್ಯಂಗ್ಯಚಿತ್ರಗಳ ಅನಾವರಣ ಮಾಡಿದರು. ಸುಮಧುರ ಭೋಜನದೊಂದಿಗೆ ಅಪರಂಜಿ ಹಬ್ಬಕ್ಕೆ ತೆರೆಬಿದ್ದಿತು. ಮುಂದಿನ ವರ್ಷದ ಅಪರಂಜಿ ಹಬ್ಬದ ನಿರೀಕ್ಷೆಯಲ್ಲಿ ಎಲ್ಲರೂ ನಿರ್ಗಮಿಸಿದರು.



## "ನಮ್ಮ ನಿಮ್ಮಲ್ಲಿ"

ಮೊನ್ನೆ ಗೆಳೆಯರಾದ ವೈದ್ಯ ದಂಪತಿಗಳನ್ನು ಭೇಟಿಮಾಡುವ ಸಲುವಾಗಿ ಜಯನಗರಕ್ಕೆ ಹೋಗಿದ್ದೆ. ಮನೆ ಹತ್ತಿರದ ಹೊಸ ಉಪಹಾರ ಗೃಹದಲ್ಲಿ ಬೆಳಗಿನ ಉಪಹಾರ ಮಾಡುವುದೆಂದು ಮೊದಲೇ ನಿರ್ಧರಿಸಿದ್ದೆವು. ತಿಂಡಿ ತಿನ್ನುತ್ತಾ ಕುಳಿತಾಗ ಮಾತು ಸಹಜವಾಗಿಯೇ ಮುಂಬರುವ ಚುನಾವಣೆಗಳ ಕಡೆ ತಿರುಗಿತು.

"ಮೊದಲನೆಯ ಪಟ್ಟಿ ಬಿಡುಗಡೆ. ಅತೃಪ್ತರ ಭುಗಿಲೆದ್ದ ಆಕ್ರೋಶ' ಅಂತಿದೆ ಮೊದಲಪುಟದ ಹೆಡ್‌ಲೈನ್. ಪ್ರಜಾಪ್ರಭುತ್ವದಲ್ಲಿ ಜನಸೇವೆ ಮಾಡಲು ಕಾತರರಾಗಿರುವವರು ಇಂತಹ ಆಕ್ರೋಶ ದರ್ಪ ಮದ ಇವುಗಳನ್ನು ಪ್ರದರ್ಶಿಸುವುದು ಹೇಗೆ ಸರಿ? ಪ್ರಜಾಪ್ರಭುತ್ವ ಎಂದ ಮೇಲೆ ಪ್ರಭುತ್ವ ಹೊಂದಿರುವ ಪ್ರತಿಯೊಬ್ಬನೂ ತನ್ನೊಂದಿಗಿರುವ ಇತರರೂ ತನ್ನಷ್ಟೇ ಪ್ರಭುತ್ವ ಹೊಂದಿದ್ದು ಅವರ ಭಾವನೆಗಳಿಗೂ ಗೌರವ ಸಲ್ಲಬೇಕು ಎಂಬ ಖಚಿತ ನಂಬಿಕೆಯಿಂದ ನಡೆದುಕೊಳ್ಳಬೇಕಲ್ಲವೇ? ಗಂಟಲು ತೋಳುಬಲ ಹೆಚ್ಚಾಗಿರುವ ಒಂದು ವೋಸಿಫೆರಸ್ ಮೈನಾರಿಟಿ ಬಹುಸಂಖ್ಯಾತ ಸಜ್ಜನ ಸಮಾಜವನ್ನ ಬಂಧಿಸಿಟ್ಟು ಬೇಕಾಬಿಟ್ಟಿಯಾಗಿ ನಡೆದುಕೊಳ್ಳುವುದು ಯಾವ ನ್ಯಾಯ? ಇದನ್ನೆಲ್ಲಾ ಬದಲಿಸಿ ಒಂದು ಪ್ರೌಢ ಸಮಾಜವನ್ನು ನಿರ್ಮಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾದರೂ ಏನಿರಹುದು? ' ಎಂದು ವೈದ್ಯ ಕೇಳಿದ.

'ಮಾತಿನ ಭರಾಟೆಯಲ್ಲಿ ದೋಸೆ ತಣ್ಣಗಾದೀತು. ಬಿಸಿ ಬಿಸಿ ಇರುವಾಗಲೇ ದೋಸೆ ತಿನ್ನಲು ಚೆಂದ. ಈಗಲೇ ತಿನ್ನಿ' ಅಂತ ಸುಹಾಸಿನಿ ಒಂದು ಉಪಯುಕ್ತ ಹಾಗೂ ಸಾಮಯಿಕ ಸಲಹೆಯನ್ನು ನೀಡಿದರು.

ರಾಜಕಾರಣಿಗಳ ನಡವಳಿಕೆ ಒಂದು ಸಮಾಜದ ಸಾಮಾನ್ಯರ ದಿನನಿತ್ಯದ ನಡವಳಿಕೆಯಿಂದ ಅಷ್ಟೇನು ಭಿನ್ನವಾಗಿರುವುದಿಲ್ಲ. ನಾವು ತಿಂಡಿ ತಿನ್ನುತ್ತ ಕುಳಿತಿದ್ದ ಮೇಜಿನ ಹತ್ತಿರದ ಮೇಜಿನಲ್ಲೇ ಕುಳಿತಿದ್ದ ಒಂದು ಬೆಳಗಿನ ವಾಕಿಂಗ್ ಗುಂಪಿನ ಕೂಗಾಟ, ಅಟ್ಟಹಾಸದ ನಗು ಇಡೀ ಹಾಲನ್ನು ತುಂಬಿತ್ತು. ಅದರಲ್ಲಿ ಒಬ್ಬನಂತೂ ತಾನು ಮಾಡಿದ ಪಿ.ಜೆ. ಗೆ ಪ್ರತಿಕ್ರಿಯೆಯನ್ನು ನಮ್ಮಿಂದಲೂ ನಿರೀಕ್ಷಿಸುವವನಂತೆ ನಮ್ಮ ಕಡೆ ಪದೇ ಪದೇ ನೋಡುತ್ತಿದ್ದ.

ಮಿತ್ರ ವೈದ್ಯರ ಉದ್ಗಾರ, ಪಕ್ಕದ ಮೇಜಿನಲ್ಲಿ ಕುಳಿತಿದ್ದ ನಮ್ಮ ಸಹ ಭಾರತೀಯರ ಸಂವೇದನಾರಹಿತ ನಡವಳಿಕೆ ಇವುಗಳು ನನಗೆ ಇಂಗ್ಲೆಂಡಿನಲ್ಲಿ ನಾನು ವಾಸವಾಗಿದ್ದ ದಿನಗಳನ್ನು ನೆನಪಿಗೆ ತಂದವು.

ಆ ದೇಶದಲ್ಲಿ ಒಂದು ಉಪಹಾರ ಗೃಹ ತುಂಬಿದ್ದಾಗಲೂ ಅಲ್ಲಿನ ಮಾತುಕತೆಗಳು ಆಯಾಯ ಟೇಬಲ್ಲುಗಳ ಪರಿಯನ್ನು ದಾಟುವುದಿಲ್ಲ. ಇತರ ಖಾಸಗೀ ಜಾಗವನ್ನು ಅತಿಕ್ರಮಿಸಬಾರದೆಂಬ ಸಂವೇದನೆ ಅಲ್ಲಿನವರೆಲ್ಲರಲ್ಲೂ ಕಾಣಬಹುದು. ಬ್ಯಾಂಕುಗಳಲ್ಲಿ ಕ್ಯೂ ನಿಲ್ಲುವಾಗಲಂತೂ ಒಬ್ಬರಿಂದ ಇನೊಬ್ಬರಿಗೆ ಕನಿಷ್ಠಪಕ್ಷ ಎರಡು ಅಡಿಯಾದರೂ ಇದ್ದೀತು. ಆ ಜನರ ಮಾತುಕತೆಗಳಲ್ಲೇ ಅವರ ಸೌಜನ್ಯ ನಾಜೂಕುಗಳನ್ನು ಬಹು ಸುಲಭವಾಗಿ ಗುರುತಿಸಬಹುದು. ನಾನು ಒಬ್ಬ ಬ್ರಿಟಿಷ್ ಮಹಿಳೆಯ ಮನೆಯಲ್ಲಿ ಪೇಯಿಂಗ್ ಗೆಸ್ಟ್ ಆಗಿದ್ದ ದಿನಗಳಲ್ಲಿ ಒಮ್ಮೆ ಭಾನುವಾರ ಬೆಳಗ್ಗೆ ಆಕೆಯೊಂದಿಗೆ ಹತ್ತಿರ ಗಯೆಟ್ ವ್ಯಾಲಿ ಎಂಬ ಪ್ರೇಕ್ಷಣೀಯ ಸ್ಥಳಕ್ಕೆ ಹೋಗುವುದಿತ್ತು. ನಾನು ಮೇಲಿನ ಮಹಡಿಯಲ್ಲಿನ ನನ್ನ ರೂಮಿನಲ್ಲಿ ಹೊರಡಲು ಸಿದ್ಧವಾಗುತ್ತಿದ್ದೆ. ಕೆಳಗಿನಿಂದ ನಮ್ಮ

ಮನೆಯೊಡತಿಯ ಕೂಗು: ' ಕೂಮರ್ ಆರ್ ಯು ನಿಯರ್ಲಿ ರೆಡಿ?' ನಾನು 'ವಿಲ್ ಬಿ ಡೌನ್ ಇನ್ ಎ ಮಿನಿಟ್' ಎಂದು ಉತ್ತರಿಸಿ ಕೆಲವು ಕ್ಷಣಗಳಲ್ಲೇ ಕೆಳಕ್ಕೆ ನಡೆದೆ. ಆಕೆ ನನ್ನ ಸಿದ್ಧತೆಯನ್ನು ಪ್ರಶ್ನಿಸುವಾಗ 'ಆರ್ ಯು ರೆಡಿ?' ಎಂದಾಗಲೀ 'ಆರ್ ಯು ನಾಟ್ ರೆಡಿ ಎಟ್?' ಎಂದಾಗಲೀ ಕೇಳಲಿಲ್ಲ. ಏಕೆಂದರೆ ಹಾಗೆ ಕೇಳುವುದು ಅಸಭ್ಯ, ಒರಟುತನ, ನಿಯರ್ಲಿ ಎಂಬ ಪದವನ್ನು ಉಪಯೋಗಿಸುವುದರಿಂದ ಪ್ರಶ್ನೆಯಲ್ಲಿನ ಘಾಟು ಶಮನಗೊಂಡು ಪ್ರಶ್ನೆಗೆ ಸೌಜನ್ಯದ ಮೆರಗು ದೊರಕುತ್ತದೆ.

ಚುನಾವಣೆಯ ಸಮಯದಲ್ಲಿ ಇಲ್ಲಿನಂತೆ ದಿನಪತ್ರಿಕೆಯ ತುಂಬ ರಾಜಕಾರಣದ್ದೇ ಸುದ್ದಿ ಅಲ್ಲಿ ಕಾಣಸಿಗದು. ಹೆರಾಲ್ಡ್ ವಿಲ್ಸನ್ ಪ್ರಧಾನಮಂತ್ರಿಯಾದಾಗ ನಡೆದ ಚುನಾವಣೆಯ ಸಮಯದಲ್ಲಿ ನಾನು ಆ ದೇಶದಲ್ಲಿದ್ದೆ. ಆ ದಿನಗಳಲ್ಲಿ ಒಮ್ಮೆ ಮೊದಲ ಪುಟದಲ್ಲಿ ಲೀಡ್ ಬರಹವೊಂದನ್ನು ಹೊರತುಪಡಿಸಿ ಮಿಕ್ಕೆಲ್ಲವೂ ತೋಟಗಾರಿಕೆ, ಸಾಕುನಾಯಿಗಳ ಲಾಲನೆ ಪಾಲನೆ ನಾಟಕದ ವಿಮರ್ಶೆ ಮುಂತಾದ ವಿಷಯಗಳೇ ತುಂಬಿದ್ದನ್ನು ನಾನು ಗಮನಿಸಿದ್ದೆ. ಬ್ರಿಟಿಷ್ ಪಾರ್ಲಿಮೆಂಟಿನ ಕಾರ್ಯವಿಧಾನವನ್ನು ಗಮನಿಸಿದರೆ ಅಲ್ಲಿನವರ ರೀತಿನೀತಿಗಳನ್ನು ಬಹಳಷ್ಟುಮಟ್ಟಿಗೆ ಅರ್ಥಮಾಡಿಕೊಳ್ಳಹುದು. ಒಬ್ಬ ಎಂ.ಪಿ. ಮಾತನಾಡುತ್ತಿರುವಾಗ ಇನ್ನೊಬ್ಬರು ಬಾಯಿಹಾಕುವುದಿಲ್ಲ. ಸ್ಪೀಕರ್ ಹೇಳುವುದಕ್ಕೆ ಮುಂಚೆಯೇ ಮಾತನಾಡುತ್ತಿರುವವನು ಮಾತು ಮುಗಿಸಿ ಇನ್ನೊಬ್ಬರಿಗೆ ಅವಕಾಶ ಮಾಡಿಕೊಡುತ್ತಾನೆ. ಪಾರ್ಲಿಮೆಂಟಿನ ಇಡೀ ಸಂವಾದ ಒಂದು ಬಗೆಯ ಪ್ರೌಢತೆ, ಹಾಸ್ಯಪ್ರಜ್ಞೆ ಇವುಗಳನ್ನು ಪ್ರದರ್ಶಿಸುತ್ತಿರುತ್ತದೆ. ಒಮ್ಮೆ ಒಬ್ಬ ಮಂತ್ರಿ ಪ್ರಶ್ನೋತ್ತರ ಸಮಯದಲ್ಲಿ ಸದನದಲ್ಲಿ ಇರಲಿಲ್ಲ. ಇದಿರು ಪಕ್ಷದವ ಕೇಳಿದ ಪ್ರಶ್ನೆಗೆ ಆತ ಉತ್ತರ ನೀಡಬೇಕಾಗಿತ್ತು. ತಡವಾಗಿ ಬಂದ ಆತ, 'ನಾನು ಈ ಪ್ರಶ್ನೆಗೆ ಉತ್ತರಿಸಲು ಇಲ್ಲಿರಬೇಕಾಗಿತ್ತು. ಇಲ್ಲಿರದೇ ನಾನು ಮಹತ್ತರವಾದ ಅಪರಾಧವನ್ನು ಮಾಡಿದ್ದೇನೆ. ಅದಕ್ಕೆ ಪ್ರಾಯಶ್ಚಿತರೂಪವಾಗಿ ಇಗೋ ನನ್ನ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಹೊರಡುತ್ತಿದ್ದೇನೆ' ಎಂದು ಹೇಳಿ ಆತ ಹೊರಟೇಬಿಟ್ಟ.

ಇಂತಹ ಸಂಸ್ಕೃತಿ ಒಂದು ಜನತೆಯಲ್ಲಿ ಹಾಸುಹೊಕ್ಕಾಗಬೇಕಾದರೆ ಆ ಜನತೆಯಲ್ಲಿ ಹಲವು ಗುಣಗಳು ರಕ್ತಗತವಾಗಿರಬೇಕಾಗುತ್ತದೆ. ಇತರರ ಬಗ್ಗೆ ಸಹಿಷ್ಣುತೆ, ಇತರರ ಹಕ್ಕುಗಳು ತಮ್ಮ ಹಕ್ಕಿನಷ್ಟೇ ಅಮೂಲ್ಯ ಎಂದು ತಿಳಿಯುವಷ್ಟು ಸೌಜನ್ಯತೆ, ಇವುಗಳನ್ನೆಲ್ಲಾ ಮಕ್ಕಳಿಗೆ ಚಿಕ್ಕಂದಿನಿಂದಲೂ ಮನೆಯಲ್ಲಿ, ಶಾಲೆಯಲ್ಲಿ ಪ್ರೀತಿಯಿಂದ ಕಲಿಸಿರಬೇಕಾಗುತ್ತದೆ.

ಹಿಂದೊಮ್ಮೆ ನಾನು ನನ್ನ ಮಗಳನ್ನು ನೋಡಲು ಇಂಗ್ಲೆಂಡಿನಲ್ಲಿ ಮಿಲ್ಟನ್‌ಕೀನ್ಸ್ ಎಂಬ ಊರಿಗೆ ಹೋಗಿದ್ದೆ. ಒಂದು ಸಂಜೆ ನನ್ನ ಮಗಳು ಆರತಿ, ಮೊಮ್ಮಗಳು ಅರುಷಿ ಮತ್ತು ನಾನು ಹತ್ತಿರದ ಕಾಲ್ಡಿಕಾಟ್ ಸರೋವರಕ್ಕೆ ವಿಹಾರಕ್ಕಾಗಿ ಹೋದೆವು. ಅರುಷಿ ಆಗ ಎರಡು ತುಂಬಿ ಮೂರಕ್ಕೆ ಕಾಲಿಟ್ಟಿದ್ದಳು. ಅದೊಂದು ವಿಚಿತ್ರ ವಯಸ್ಸು. ಕಾರಣವಿಲ್ಲದೇ ಕೋಪ ಹಠ ರಚ್ಚೆ ಹಿಡಿಯುವುದು ಆ ವಯಸ್ಸಿನಲ್ಲಿ ಸಾಮಾನ್ಯ. ನನ್ನ ಮಗಳು ಅವಳನ್ನು 'ರೆಬೆಲ್ ವಿಥೌಟ್ ಎ ಕಾಸ್' ಎಂದು ತಮಾಷೆ ಮಾಡುತ್ತಿದ್ದಳು. ಸರೋವರ ತಲುಪಿದ ಮೇಲೆ ಅಲ್ಲಿನ ಆಟದ ಪರಿಕರಗಳಿದ್ದ ಜಾಗದಲ್ಲಿ ಅರುಷಿಗೆ ಆಟವಾಡಿಸಿ ಅನಂತರ ಸರೋವರದ ಅಂಚಿನಲ್ಲಿದ್ದ ಪುಟ್ಟ ಉಪಹಾರಗೃಹಕ್ಕೆ ಹೋದೆವು. ಮಗಳು ನನಗೆ ಕಾಫಿ, ಮಗುವಿಗೆ ಕೇಕ್ ತರಲು ಕೌಂಟರಿಗೆ ಹೋದಳು. ನಾನು ಮಗುವಿನೊಂದಿಗೆ ಒಂದು ಟೇಬಲ್ ಹಿಡಿದಿದ್ದೆ. ನಮ್ಮಿಂದ ಮೂರನೆಯ ಟೇಬಲ್ಲಿನಲ್ಲಿ ಇಬ್ಬರು ಹಿರಿಯ ಬಿಳಿಯ ಮಹಿಳೆಯರು ಟೀ ಕುಡಿಯುತ್ತಾ ಕುಳಿತಿದ್ದರು. ಸಾಮಾನ್ಯವಾಗಿ

ಈ ಬ್ರಿಟಿಷ್ ಜನ ಬಹು ರಿಸರ್ವ್ಡ್. ಪರಿಚಯವಿಲ್ಲದೇ ಮಾತೇ ಆಡರು. ನಮ್ಮಂತಹ ಕಂದು ಬಣ್ಣದವರನ್ನು ಕಂಡರಂತೂ ಹೆದರೇ ಬಿಡುತ್ತಾರೆ! ಹಾಗಾಗಿ ಆ ಮಹಿಳೆಯರು ನನ್ನ ಕಡೆ ತಿರುಗಿಯೂ ನೋಡಲಿಲ್ಲ.

ಆರತಿ ಕಾಫಿ ಮತ್ತು ಕೇಕ್‌ಗಳನ್ನು ಹಿಡಿದುಕೊಂಡು ಟೇಬಲ್ಲಿಗೆ ಬಂದಳು. ಅರುಷಿಗೆ ಆರತಿ ತಂದ ಕೇಕ್ ಇಷ್ಟವಾಗಲಿಲ್ಲ. 'ಈ ಕೇಕ್ ಬೇಡಾ'. ಅಂತ ರಚ್ಚೆ ಹಿಡಿದಳು. ಎಷ್ಟು ಸಮಾಧಾನ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಅರತಿ ನನ್ನನ್ನು ಕುರಿತು, 'ಇದನ್ನೆಲ್ಲಾ ತಗೊಂಡು ಕಾರಿಗೆ ಹೋಗೋಣ. ಅಲ್ಲೇ ನೀನು ಕಾಫಿ ಕುಡಿಯುವಂತೆ' ಎಂದು ಹೇಳಿ ಎದ್ದಳು. ನಾನು ಅಳುತ್ತಿರುವ ಮಗುವನ್ನು ಎತ್ತಿಕೊಂಡು ಅವಳ ಹಿಂದೆ ಹೊರಟು ಉಪಹಾರಗೃಹದ ಆಚೆಗೆ ಬಂದೆ. ನಾವು ಕಾರ್ ಪಾರ್ಕಿನ ಕಡೆ ಹೆಜ್ಜೆ ಹಾಕುತ್ತಿದಂತೆ ನಮ್ಮ ಹಿಂದೆ ಯಾರೋ 'ಹಲೋ' ಎಂದು ಕೂಗಿದಂತಾಯಿತು. ನೋಡಿದರೆ ಹತ್ತಿರದ ಟೇಬಲ್ಲಿನಲ್ಲಿ ಕುಳಿತಿದ್ದ ಆ ಇಬ್ಬರು ಬಿಳಿಯ ಮಹಿಳೆಯರು. ಅವರಲ್ಲಿ ಒಬ್ಬಾಕೆ ಆರತಿಯನ್ನು ಕುರಿತು 'ಮಗು ಅಳುಕ್ಕೆ ಶುರು ಮಾಡಿತು ಅಂತ ಯಾಕೆ ಎದ್ದು ಹೋದಿರಿ. ಉಪಹಾರಗೃಹದ ಪರಿಸರ ಎಷ್ಟು ಚೆನ್ನಾಗಿದೆ. ಅಲ್ಲೇ ಕುಳಿತು ನೀವು ಉಪಹಾರ ಸೇವಿಸಬಹುದು ನಾವೇನು ಮಕ್ಕಳನ್ನು ನೋಡಿಲ್ಲವೇ' ಎನ್ನುತ್ತಾ ಆಕೆ ಮಗುವನ್ನು ಎತ್ತಿಕೊಳ್ಳಲು ನನ್ನ ಕಡೆ ಕೈಚಾಚಿದಳು. ಅರುಷಿ ಅಳು ನಿಲ್ಲಿಸಿ ಅವರತ್ತ ಹೋದಳು. ಆರತಿ 'ನಿಮಗೆ ಯಾಕೆ ತೊಂದರೆ' ಅಂತ ಹೇಳುತ್ತಿದ್ದುದನ್ನೂ ಕೇಳದೆ ಆ ಮಹಿಳೆಯರು ಅರುಷಿಯೊಂದಿಗೆ ಪುನಃ ಉಪಹಾರಗೃಹ ಪ್ರವೇಶಿಸಿದರು. ಹೊಸಮುಖವೋ ಏನೋ ಅರುಷಿ ಎಂದಿನಂತೆ ಪ್ರಸನ್ನವದನಳಾಗಿ ಅವರುಗಳು ತಿನ್ನಿಸಿದ ಕೇಕನ್ನು ತಿಂದು ಸಂತಸಿದಳು. ಅವರಿಗೆ ತೊಂದರೆಯಾಗಬಾರದೆಂದು ಎದ್ದು ಹೊರಟು ಆರತಿ ತೋರಿದ ಸೌಜನ್ಯವನ್ನು ಕಂಡು ಆ ಮಹಿಳೆಯರಿಗೆ ಆಶ್ಚರ್ಯವಾಗಿರಬೇಕು. ತಮ್ಮ ಜನಾಂಗದ ನಡವಳಿಕೆಯನ್ನು ಕಂದುಬಣ್ಣದವರಲ್ಲೂ ಕಂಡು ಆ ಮಹಿಳೆಯರು ಆ ನಡವಳಿಕೆಗೆ ಸ್ಪಂದಿಸಿ ನಮ್ಮನು ಹಿಂದಕ್ಕೆ ಕರೆಯಲು ಬಂದರೆಂದು ನನಗೆ ಕಂಡಿತು.

ಇದನ್ನೆಲ್ಲಾ ನಾನು ವೈದ್ಯ ದಂಪತಿಗಳೊಂದಿಗೆ ಹಂಚಿಕೊಂಡೆ.

'ಸಿವಿಲ್ ಸೊಸೈಟಿ ಅಲ್ಲಲ್ಲಿ ತಮ್ಮ ಇಷ್ಟದ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರ ಜೊತೆಗೆ ವಿವಿಧ ಸೌಜನ್ಯ ಸಮುದಾಯಗಳು ಒಂದುಗೂಡಿ ನಮ್ಮ ರಾಜಕಾರಣಿಗಳನ್ನು ಸಾರ್ವಜನಿಕ ವೇದಿಕೆಗಳಲ್ಲಿ ಪ್ರಶ್ನಿಸುವಂತಾಗಬೇಕು. ಅದಕ್ಕೂ ಹೆಚ್ಚಾಗಿ ನಮ್ಮ ಕಣ್ಣ ಮುಂದೆಯೇ ಅನಾಗರೀಕ ಅಸಭ್ಯ ನಡವಳಿಕೆ ಕಂಡರೆ, ಅಲ್ಲೇ ಆ ಕ್ಷಣದಲ್ಲೇ ಅದನ್ನು ಖಂಡಿಸುವ ತಾಖತ್ತನ್ನು ಬೆಳೆಸಿಕೊಳ್ಳಬೇಕು ಆಗಲೇ ನಮ್ಮ ಸಮಾಜದ ಉದ್ಧಾರ' ಎಂದ ವೈದ್ಯ.

ಪಕ್ಕದ ಟೇಬಲ್ಲಿನವರು ತಮ್ಮ ಉಪಹಾರ ಮುಗಿಸಿ ಹೊರಟಿದ್ದರು. ಕೊನೆಯಲ್ಲಿ ನಡೆಯುತ್ತಿದ್ದವನ ಜುಬ್ಬಾದ ಅಂಚು ಮೇಜಿನ ಮೇಲಿದ್ದ ಪಿಂಗಾಣಿ ಕಾಫಿ ಕಪ್ಪಿಗೆ ಸಿಕ್ಕಿದ್ದರಿಂದ ಕಾಫಿ ಕಪ್ಪು ನೆಲಕ್ಕೆ ಉರುಳಿ ಕಪ್ಪು ಚೂರು ಚೂರಾಯಿತು. ಯಾರೂ ಅದನ್ನು ಲೆಕ್ಕಿಸದೇ ಜೋರಾಗಿ ಮಾತನಾಡುತ್ತಾ ತಮ್ಮ ದಾರಿ ಹಿಡಿದರು. ನಾವು ಹುಷಾರಾಗಿ ಚೂರುಗಳನ್ನು ಬಳಸಿ ನಡೆದು ಮನೆಗೆ ಹೊರಟೆವು.

**ಶಿವಕುಮಾರ್**

# ಏಕೆ ಇಷ್ಟು ಶ್ರಮ?

**ಸಂದೀಪ್ ಶಾಸ್ತ್ರಿ**

ಆ ಹಳ್ಳಿಯಲ್ಲಿ ಮತದಾನ ಶುರುವಾಗಿದೆ. ಮತಕಟ್ಟೆಯ ಮುಂದೆ ಒಂದು ಉದ್ದನೆಯ ಸಾಲಿದೆ. ಶ್ರೀಮಂತ, ಅಕ್ಷರಸ್ಥ, ಅನಕ್ಷರಸ್ಥ, ಹೆಂಗಸರು, ಗಂಡಸರು ಹೀಗೆ ಎಲ್ಲರೂ ತಮ್ಮ ಸರದಿಗಾಗಿ ಕಾಯುತ್ತಿದ್ದಾರೆ.

ಮತದಾನ ಮಾಡಿ ಹೊರಕ್ಕೆ ಬರುತ್ತಿದ್ದ ಮಧ್ಯಮ ವಯಸ್ಸಿನ ಮಹಿಳೆಯೊಬ್ಬಳನ್ನು ಪತ್ರಕರ್ತನೊಬ್ಬ ಮಾತನಾಡಿಸಿದ.

'ಯಾರಿಗೆ ಮತ ಹಾಕಿದಿ?'

'ನನಗೆ ಗೊತ್ತಿಲ್ಲ' ಎಂದಳು ಆಕೆ ಸಲೀಸಾಗಿ.

ಅಂದರೆ....

ಆಕೆ ವ್ಯಕ್ತಿಗೆ ಮತ ಹಾಕಿರಲಿಲ್ಲ. ಚಿಹ್ನೆಗೆ ಹಾಕಿದ್ದಳು.

'ಮತ ಚಲಾಯಿಸಿದ್ದರಿಂದ ನನಗೆ ಏನಾದರೂ ಲಾಭವಾಗುವುದೇ?'

'ಎಂಥದ್ದೂ ಇಲ್ಲ.'

'ಮತ್ತೆ ಏಕೆ ಅರ್ಧತಾಸು ಬಿಸಿಲಿನಲ್ಲಿ ನಿಂತು ಶ್ರಮ ಪಟ್ಟೆ?'

ಆಕೆ ಪತ್ರಕರ್ತನತ್ತ ದಿಟ್ಟಿಸಿ ನೋಡಿ ಕೇಳಿದಳು: 'ಸಾಲಿನಲ್ಲಿ ನನ್ನ ಹಿಂದೆ ಯಾರು ಯಾರು ನಿಂತಿದ್ದರೆಂದು ಗಮನಿಸಿದಿರಾ?'

'ಇಲ್ಲ...'

'ನನ್ನ ಹಿಂದೆ ಈ ಹಳ್ಳಿಯ ಅತ್ಯಂತ ಶ್ರೀಮಂತ ನಿಂತಿದ್ದ. ಅವನ ಹಿಂದೆ ಹಳ್ಳಿಯ ಏಕೈಕ ದೇವಾಲಯದ ಅರ್ಚಕ, ಅವನ ಹಿಂದೆ ನನಗೆ ಕೆಲಸ ಕೊಡುವ ಕಂಟ್ರಾಕ್ಟರ್..'

'ಏನೀಗ?'

'ಈ ದೇಶದ ಬೇರೆ ಯಾವ ಸಾಲಿನಲ್ಲಿ ನಾನು ಇವರಿಗಿಂತ ಮೊದಲು ನಿಲ್ಲಲು ಸಾಧ್ಯ? ನನ್ನ ನಂತರ ಇವರೆಲ್ಲ ನಾನು ಮಾಡಿದ ಕೆಲಸವನ್ನೇ ಇವರು ಇನ್ನೆಲ್ಲಿ ಮಾಡಬಹುದಾಗಿದೆ? ಅದು ಚುನಾವಣೆಯ ದಿನ ಮಾತ್ರ ಸಾಧ್ಯ. ಆದುದರಿಂದಲೇ ನಾನು ಇವರಿಗಿಂತ ಮೊದಲು ಬಂದು ನಿಲ್ಲುತ್ತೇನೆ' ಎಂದಳು ಆಕೆ.

ಚುನಾವಣೆ ಎಂದರೆ ಕೇವಲ ಮತದಾನವಲ್ಲ!

# ಹೀಗೊಬ್ಬ ಸೀದಾಸಾದಾ ಪ್ರಸಿದ್ಧ ವ್ಯಂಗ್ಯಚಿತ್ರ-ಖಾರ

**ಪ್ರಕಾಶ್ ಶೆಟ್ಟಿ**

ಮುಂಬೈ ನಗರಿಯಲ್ಲಿ ಹೇಗೂ ಬದುಕ ಬಹುದು. ಹೆಚ್ಚು ಶ್ರಮ, ಸ್ವಲ್ಪ ತಾಳ್ಮೆ, ಇನ್ನೊಂದಷ್ಟು ಛಲ ಇರಬೇಕಷ್ಟೆ. ಕಾಸರಗೋಡಿನ ಪುಟ್ಟ ಹಳ್ಳಿ ಬೈಲಂಗಡಿಯಲ್ಲಿ ಹುಟ್ಟಿ ಬೆಳೆದ ಪ್ರಭಾಕರ ಎಂಬ ಯುವಕ ಮಾಡಿದ್ದು ಅದನ್ನೆ. ಪಕ್ಕದ ಉಡುಪಿಯ ಕೆ.ಕೆ.ಹೆಬ್ಬಾರ್ ಎಂಬ ವ್ಯಕ್ತಿ ಮುಂಬೈಗೆ ಹೋಗಿ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕಲಿತು ದೇಶದ ಅಗ್ರಗಣ್ಯ ಕಲಾವಿದನಾಗಬಹುದಾದರೆ ತನಗೂ ಅದು ಸಾಧ್ಯ ಎಂಬ ಅಚಲ ನಂಬಿಕೆ. ನಂಬಿಕೆ ಹುಸಿಯಾಗಲಿಲ್ಲ.

ಅಂದಿನ ದಿನಗಳಲ್ಲಿ ಯಾವನೇ ಕಲಾವಿದ ಮುಂಬೈಯಲ್ಲಿ ಹೆಸರು ಮಾಡಿದರೆ ಇಡೀ ದೇಶದಲ್ಲಿ ತನ್ನ ಛಾಪು ತೋರಿಸಿದ್ದಾನೆ ಎಂದೇ ಅರ್ಥ. ಯಾಕೆಂದರೆ ಆಗ ಅತೀ ಹೆಚ್ಚು ಇಂಗ್ಲೀಷ್ ಪತ್ರಿಕೆಗಳು ಮುಂಬೈಯಲ್ಲೇ ಪ್ರಕಟವಾಗುತ್ತಿತ್ತು. ಅಂತಹ ಪತ್ರಿಕೆಗಳ ಮೂಲಕ ಕಲಾವಿದನ ಪರಿಚಯವಾಗುವುದು ಜಾಕ್‌ಪಾಟ್ ಹೊಡೆದ ಹಾಗೇ ಎಂದೇ ಭಾವಿಸುವ ಕಾಲವದು. ಜೆ.ಜೆ.ಸ್ಕೂಲ್ ವಿದ್ಯಾರ್ಥಿ ಎಂಬ ಹೆಗ್ಗಳಿಕೆಯೊಂದಿಗೆ ಪ್ರಭಾಕರ ರಾವ್‌ಬೈಲ್ ಬಣ್ಣಗಳೊಂದಿಗೆ ಮುಂಬೈಯ ಬಣ್ಣದ ಬದುಕನ್ನೂ ಕಂಡುಕೊಂಡರು. ಜೀವನ ಸಾಗಲು ಇವರಿಗೆ ಸಿಕ್ಕ ಜಾಗವೇ ಜೀವ ವಿಮಾ ಕಂಪೆನಿ. ಅದೂ ಅಲ್ಲಿನ ಪ್ರಚಾರ ವಿಭಾಗದಲ್ಲಿ ಡಿಸೈನರ್ ಹುದ್ದೆ. ಅಲ್ಲಿ ಶುರುವಾದದ್ದು ಅವರ ಮತ್ತು ಗೆರೆಗಳ ಮೊಹಬ್ಬತ್!


ರಾವ್‌ಬೈಲ್ ಅಂದರೆ ನೆನಪಾಗುವುದು ಸಣಕಲು ಗೆರೆಗಳು. ಈ ಗೆರೆಗಳು ಅವರಿಗೇ ವಿಚಿತ್ರವಾಗಿ ಕಂಡಿರಬೇಕು. ಕೂಡಲೇ ಗಂಭೀರಕಲೆಯ ಬದಲು ಬೇರೆ ದಾರಿ ಹಿಡಿದರು. ಅದುವೇ ತಮಾಷೆಯೊಂದಿಗೆ ಚುಚ್ಚುವ ಮಾರ್ಗ. ಅವರಲ್ಲಿದ್ದ ಮಿಮಿಕ್ರಿ ಪ್ರತಿಭೆ ಕೂಡಾ ಅದಕ್ಕೆ ಸಹಕಾರಿಯಾಗಿರಬೇಕು. ರಾವ್‌ಬೈಲ್ ದೇಶದ ಪ್ರಸಿದ್ಧ ವ್ಯಂಗ್ಯ ಚಿತ್ರಕಾರರಾಗಿಯೇ ಬಿಟ್ಟರು. ರೀಡರ್ಸ್ ಡೈಜೆಸ್ಟ್, ಟೈಮ್ಸ್ ಆಫ್ ಇಂಡಿಯಾ, ಇಲ್ಲಸ್ಟ್ರೇಟೆಡ್ ವೀಕ್ಲಿ, ಡೆಬೋನೇರ್‌ನಲ್ಲಿ ರಾವ್‌ಬೈಲ್ ಮಿಂಚಿದರು. ಅವರು ದೀರ್ಘವಾಗಿ ದಿನಾಸರಣಿ ವ್ಯಂಗ್ಯಚಿತ್ರಗಳನ್ನು ಮಾಡತೊಡಗಿದ್ದು ದಿ ಡೈಲಿ ಯಲ್ಲಿ. ಇಷ್ಟೊಂದು ಖ್ಯಾತಿ ಪಡೆದವರೊಬ್ಬರ ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸುವ ಸೌಭಾಗ್ಯ ಕನ್ನಡಪತ್ರಿಕೆಗಳಿಗೂ ಸಿಕ್ಕಿದ್ದು ಮಾತ್ರ ಕನ್ನಡ ವ್ಯಂಗ್ಯಚಿತ್ರ ಲೋಕ ಖಂಡಿತ ಮರೆಯುವುದಿಲ್ಲ. ಕನ್ನಡದ ಓದುಗರಿಗೆ ಅವರು ರಚಿಸಿದ ಚಳವಳಿಯ ಆ ಒಂದು ಮುಂಜಾನೆ, ಬಿಸಿಬಿಸಿ ಚರ್ಚೆಯ ನಡುವೆ, ಯಾವುದೋ ಒಂದು ಸ್ಲಮ್ಮಲ್ಲಿ, ನಗರದ ಗಿಜಿಗುಟ್ಟುವ ಜನಸಂದಣಿಯ ನಡುವೆ – ಮುಂತಾದ ಅನೇಕ ಕಾರ್ಟೂನ್‌ಗಳು ಮತ್ತೆ ಮತ್ತೆ ಮೆಲುಕು ಹಾಕುವಂತಹುದು.

ಮೊನ್ನೆ ಎಪ್ರಿಲ್ 4ಕ್ಕೆ ಎಂಬತ್ತರ ರಾವ್‌ಬೈಲ್ ತಮ್ಮ ಕುರುಹು ಬಿಟ್ಟು ಹೋಗಿದ್ದಾರೆ. ಅದೆಷ್ಟೋ ವ್ಯಂಗ್ಯ ರೇಖೆಗಳನ್ನು ಸೃಷ್ಟಿಸಿದ ಆ ಕೈಗೊಂದು ಸಿಹಿಮುತ್ತು.





"ಮಕ್ಕಳೇ! ಇವತ್ತು ಟೊಮೆಟೋ ತಿಳಿಸಾರು... ನಿನ್ನೆಯ ಸಭೆಯಲ್ಲಿ ನಿಮ್ಮ ಅಪ್ಪನ ಮೇಲೆ ಟೊಮೆಟೋ ಎಸೆದಿದ್ದರು..."



# ನಿರುತ್ತರೆ !

• ಶಾಂತರಾಜ ಐತಾಳ್

ಯಾರಾದರೂ ಇಬ್ಬರು ಸ್ವಲ್ಪ ಮೆತ್ತಗೆ, ಗುಟ್ಟಿನಲ್ಲಿ ಮಾತಾಡುತ್ತಿದ್ದರೆ, ಅದನ್ನು ಆಲಿಸಲು ಹಾತೊರೆಯುತ್ತಿರುತ್ತಾಳೆ ನನ್ನ ಮಡದಿ ಸುಭದ್ರ ಉರುಫ್ ಸುಬ್ಬಿ. ಅವಳ ಬೇಹುಗಾರಿಕೆಗೆ ಮೊದಲ ಟಾರ್ಗೆಟ್ ನಾನೇ ಆಗಿರುತ್ತಿದ್ದೆ. ರಾಜ್ಯದ ಚಾಡಿಭಾಗ್ಯ ಯೋಜನೆಯಡಿ ಅವಳಿಗೆ ಯಾವುದೇ ಸೂಕ್ತ ಚಾಡಿ ಮಾತುಗಳು ಲಭ್ಯವಿರದಿದ್ದ ಸಂದರ್ಭಗಳಲ್ಲಿ ನಾನೇ ಅವಕಾಶಗಳನ್ನು ಕಲ್ಪಿಸಿಕೊಡುತ್ತಿದ್ದೆ.

**ನನಗದೆಷ್ಟೋ ಬಾರಿ 'ಕದ್ದಾಲಿಕೆಯ ಭಾಗ್ಯ' ಲಭಿಸಿದ್ದಿದೆ.**

ಒಮ್ಮೆ ಒಂದು ಸಮಾರಂಭಕ್ಕೆ ಹೋಗಿದ್ದಾಗ ನಮಗೆ ಅಲ್ಪ ಪರಿಚಿತರಾಗಿದ್ದ ಇಬ್ಬರು ಮಹಿಳೆಯರು ಮೆತ್ತಗೆ, ಆದರೆ ದೃಢವಾದ ಸ್ವರದಲ್ಲಿ ಮಾತಾಡುತ್ತಾ ಒಬ್ಬರನ್ನೊಬ್ಬರು ಮೂದಲಿಸುತ್ತಿರುವುದನ್ನು ಕಂಡು ನಾನು ಸುಬ್ಬಿಯನ್ನು ಆ ಸ್ಥಳಕ್ಕೆ ಛೂ ಬಿಟ್ಟೆ. ಹತ್ತು ನಿಮಿಷ ಅವರ ಬಳಿ ಬೆಕ್ಕಿನಂತೆ ಸುಳಿದಾಡಿ, ವಿಷಯ ಸಂಗ್ರಹ ಮಾಡಿ ನನಗೆ ವರದಿ ಒಪ್ಪಿಸಿದಳು ಸುಬ್ಬಿ.

'ರೀ, ವನಜಕ್ಕ ವಾಣಿ ಹತ್ರ ಹೇಳಿದ್ರಂತೆ– ತಾವು ಹೇಳಿದ ಗುಟ್ಟನ್ನು ಯಾರಿಗೂ ಹೇಳಬೇಡ–ಅಂತ. ಆದರೆ ವಾಣಿ ಅದೇ ವಿಷಯವನ್ನು ತನ್ನ ಚಿಕ್ಕಮ್ಮ ವೇದಕ್ಕನಿಗೆ 'ಯಾರಿಗೂ ಹೇಳಬೇಡಿ'–ಅಂತ ಸೂಚನೆ ಕೊಟ್ಟೇ ಹೇಳಿದ್ದಳಂತೆ. ಆದರೆ ಈ ವೇದಕ್ಕ ಚಿಕ್ಕಮ್ಮ ಇದ್ದಾರಲ್ವ, ಅವರು ವನಜಕ್ಕನ ಹತ್ರವೇ ಹೇಳಿದ್ರಂತೆ ನಿನ್ನೆ–'ಹೀಗೆ ವಾಣಿ ಎಲ್ಲ ಹೇಳಿದ್ಲು ಹೌದಾ'ಅಂತ. ಅದಕ್ಕೆ ಈಗ ವನಜಕ್ಕ ವಾಣಿ ಹತ್ರ ಮತ್ತೆ ಹೇಳ್ತಾ ಇದ್ರು–'ಈ ವಿಷಯ ವೇದಕ್ಕ ನನ್ನ ಹತ್ರ ಹೇಳಿದ್ರು ಹೌದಾ ಅಂತ ನೀನು ಮತ್ತೆ ಕೇಳೋದು ಬೇಡ ಮಾರಾಯ್ತಿ' ಅಂತ. ಭಾರೀ ಖುಷಿಯಾಗಿತ್ತು ಸುಬ್ಬಿಗೆ. ಆದರೆ ನನಗೆ ಹೈಸ್ಕೂಲ್‌ನ ಸೋಶಿಯಲ್ ಕ್ಲಾಸ್ ಪಾಠದ ಹಾಗೆಯೇ ಸುಬ್ಬಿಯ ಮಾತಿನ ತಲೆಬುಡ ಅರ್ಥ ಆಗ್ಲಿಲ್ಲ.

ನನ್ನ ಅರ್ಧಾಂಗಿ ಸುಬ್ಬಿ ಪಂಚಾಯತ್ ಮಟ್ಟದ ಸುದ್ದಿಯಿಂದ ಹಿಡಿದು, ರಾಜ್ಯ, ರಾಷ್ಟ್ರ ಮಟ್ಟವೇ ಏಕೆ ಅಂತಾರಾಷ್ಟ್ರೀಯ ಮಟ್ಟದ ಸುದ್ದಿಯವರೆಗೂ ಸಂಗ್ರಹಿಸಿ, ಬಿತ್ತರಿಸುವ ಕಲೆಯನ್ನು ಮೈಗೂಡಿಸಿಕೊಂಡಿದ್ದಳು. ಚಿತ್ರತಾರೆ ಶ್ರೀದೇವಿಯ ನಿಧನಕ್ಕೆ ನಿಜವಾದ ಕಾರಣ ಏನು; ಯಾವುದೋ ರಾಜ್ಯದ ಮುಖ್ಯಮಂತ್ರಿ ತನ್ನ ಆಪ್ತ ಸಹಾಯಕಿಗೆ ಚಿವುಟಿದ್ದು ಅವಳ ಬೆನ್ನಿಗೋ, ತೊಡೆಗೋ; ಬೆಂಗಳೂರು ಹೊರವಲಯದ ಸಾಹಿತಿಯೊಬ್ಬರಿಗೆ ರಾಜ್ಯಪ್ರಶಸ್ತಿ ಬರಬೇಕಾದರೆ ಅವರು ಸಮಿತಿಯ ಒಳವಲಯದಲ್ಲಿ ನಡೆಸಿದ ಕಾರುಬಾರುಗಳೇನು; ಪುಂಡಾಟ ಮಾಡುತ್ತಿದ್ದ ಶಾಸಕರ ಪುತ್ರನನ್ನು ಯಾವಾಗಲೂ ಕೊಂಡಾಟ ಮಾಡುತ್ತಾ ಇರುವ ಜೇನುದುಂಬಿಗಳ ಕಾರ್ಯವೈಖರಿ ಹೇಗಿರುತ್ತೆ; ಪ್ರಿನ್ಸೆಸ್ ಡಯನಾಗೆ ಎಷ್ಟು ಜನ ಪ್ರೇಮಿಗಳಿದ್ದರು– ಇಂತಹ ಹತ್ತು ಹಲವು

ವಿಷಯಗಳನ್ನು ರಸವತ್ತಾಗಿ ಸುಬ್ಬಿ ತನ್ನ ಗೆಳತಿಯರಿಗೆ ತಿಳಿಸುತ್ತಿರುವಾಗ ನನಗದೆಷ್ಟೋ ಬಾರಿ 'ಕದ್ದಾಲಿಕೆಯ ಭಾಗ್ಯ' ಲಭಿಸಿದ್ದಿದೆ.

ಆದರೆ ನನ್ನ ದೊಡ್ಡ ತಲೆನೋವು ಎಂದರೆ ನಮ್ಮ ಮೂರನೇ ತರಗತಿಯ ಮಗರಾಯ ಗೋಪು! ಆತನ ಬಳಿ ಯಾವ ಗುಟ್ಟನ್ನೂ ಜಗಜ್ಜಾಹೀರು ಮಾಡುವ ತಾಕತ್ತಿದೆ ಎಂಬುದೇ ನನ್ನ ಸಮಸ್ಯೆ. ಕರ್ಕಶ ಸ್ವರ ಹೊರಡಿಸುತ್ತಿದ್ದ ಒಂದು ಟಿ.ವಿ. ನಮ್ಮಲ್ಲಿತ್ತು. ಅದರ ಮೇಲೆ ಮೂಡುತ್ತಿದ್ದ ಚಿತ್ರಗಳನ್ನು ಅಂದಾಜಿನಿಂದಲೇ ನಾವು ಗುರುತಿಸುತ್ತಿದ್ದೆವು. ಅದೊಮ್ಮೆ ಅಮಿತಾಬ್ ಬಚ್ಚನ್‌ನ ಚಿತ್ರವೇ ಇರಬೇಕು. ಟಿವಿ ಪರದೆ ಮೇಲೆ ಬರ್ತಾ ಇದೆ ಅಂತ ನಾನಂದುಕೊಂಡರೆ, ಸುಬ್ಬಿ ತಕ್ಷಣ ಬಂದು ಅದನ್ನು ಜೋಗ್ ಜಲಪಾತದಲ್ಲಿ ನೀರಿಳಿಯುವ ಚಿತ್ರ ಎಂದು ತಿದ್ದುಪಡಿ ಸೂಚಿಸಿದಳು. ಎರಡೂ ಎತ್ತರವೇ ಆಗಿರುವುದರಿಂದ ಹೀಗೆ ಗೊಂದಲವಾಗಿತ್ತು. ಇಂತಹ ಪ್ರಮಾದಗಳು ಮಿತಿ ಮೀರಲಾರಂಭಿಸಿದಾಗ ಒಂದು ಹೊಸ ಟಿವಿಯನ್ನು ಸೆಕೆಂಡ್ ಹ್ಯಾಂಡ್ ಬಜಾರ್‌ನಲ್ಲಿ ಕೊಳ್ಳುವುದೆಂದು ಸರ್ವಾನುಮತದಿಂದ ನಾನು, ಸುಬ್ಬಿ ತೀರ್ಮಾನಿಸಿದೆವು.

ಮರುದಿನ ನಾವಿಬ್ಬರೂ ಹೋಗಿ ಅಳೆದೂ, ಸುರಿದೂ ಒಂದು ಟಿವಿಯನ್ನು ಮನೆಗೆ ತರುವಷ್ಟರಲ್ಲಿ ಒಂಬತ್ತು ಮಂದಿ ಹುಡುಗರು ಅಲ್ಲಿ ಹಾಜರಿದ್ದರು–ಎಲ್ಲ ಗೋಪು ಪ್ರಾಯದವರೇ! ಹೊಸದಾಗಿ ಬರುವ ಸೆಕೆಂಡ್ ಹ್ಯಾಂಡ್ ಟಿವಿ ವೀಕ್ಷಣೆಗಾಗಿ ಆಗಲೇ ವಿಷಯ ಸಂಗ್ರಹಿಸಿದ ಗೋಪು ತನ್ನ ಮಿತ್ರರನ್ನೆಲ್ಲ ಫಲತಾಂಬೂಲಗಳನ್ನು ನೀಡಿಯೇ ಇರಬೇಕು–ಆಮಂತ್ರಿಸಿದ್ದ. ಗೋಪುನ ಪಟಾಲಂನ ಎಲ್ಲರೂ ಟಿವಿಯ ಕುಲಗೋತ್ರಗಳನ್ನೆಲ್ಲ ವಿಚಾರಿಸಿಕೊಂಡರು. ಈಗಾಗಲೇ ನಮ್ಮಲ್ಲಿದ್ದ ಸೆಕೆಂಡ್ ಹ್ಯಾಂಡ್ ಫಿಯಟ್‌ಕಾರ್, ಫ್ರಿಜ್, ಗೋಡ್ರೆಜ್ ಕವಾಟುಗಳ ಪಟ್ಟಿಗೆ ಈ ಹಳೆಯ ಟಿವಿ ಹೊಸತಾಗಿ ಸೇರ್ಪಡೆಗೊಂಡ ಹಾಗೆ ಆಯ್ತು.

ಆದರೆ ಗೋಪುನ ಪಟಾಲಂ ಮಾತ್ರ ಒಳಗಿಂದೊಳಗೇ ಮುಸಿ ಮುಸಿ ನಗುತ್ತಾ 'ಸೆಕೆಂಡ್ ಹ್ಯಾಂಡ್ ಶಾಮಣ್ಣ ಅಂಕಲ್' ಅಂತಲೇ ನನ್ನನ್ನು ತಾರೀಪು ಮಾಡಲಿಕ್ಕೆ ಶುರು ಮಾಡಿದರಂತೆ. ಅವರ ಈ ಮಾತುಗಳನ್ನು ಆಲಿಸುವುದೂ ತನ್ನ ಇತರ ಗೆಳತಿಯರ 'ದರ್ಬಾರು' ಜೀವನ ಶೈಲಿಯ ಜತೆ ನಮ್ಮನ್ನು ಹೋಲಿಸುವುದೂ ಸುಬ್ಬಿಯಿಂದ ಯಥಾಪ್ರಕಾರ ನೆರವೇರಿತು.

ನನ್ನ ಬಾಸ್ ರಮೇಶ್ ಬಾಬು ಅವರನ್ನು ಒಮ್ಮೆ ಮನೆಗೆ ಊಟಕ್ಕೆ ಬನ್ನಿ ಅಂತ ಒತ್ತಾಯ ಮಾಡಿದ ಮೇಲೆ ಒಪ್ಪಿ ಒಂದು ಭಾನುವಾರ ಮಧ್ಯಾಹ್ನ ಬಂದಿದ್ರು. ಅವರದ್ದು ಸ್ವಲ್ಪ ಮೆಳ್ಳೆಗಣ್ಣು, ಸ್ವಲ್ಪವೇನು, ಜಾಸ್ತಿಯೇ ಅಂತ ಹೇಳಬಹುದು. ಅದಕ್ಕಾಗಿ ಅವರು ಇತ್ತೀಚೆಗೆ ಒಂದು ದಪ್ಪ ಗ್ಲಾಸಿನ ಬಣ್ಣದ ಕನ್ನಡಕ ರೂಢಿ ಮಾಡಿಕೊಂಡಿದ್ದರು.

ಊಟ ಮಾಡುತಾ_ಇರುವಾಗ ಗೋಪು ಅವರನ್ನೇ ದಿಟ್ಟಿಸಿ ನೋಡುತ್ತಾ ಇದ್ದ. ಸ್ವಲ್ಪ ಹೊತ್ತಿನಲ್ಲಿ ತನ್ನ ವಿಶೇಷ ಪ್ರವಚನ ಆರಂಭಿಸಿಯೂ ಬಿಟ್ಟ– 'ಅಪ್ಪಾ, ರಮೇಶ ಬಾಬು ಅಂಕಲ್‌ದು ಒಂದು ಕಣ್ಣು ಕಾಶಿಯಾದರೆ ಇನ್ನೊಂದು ಕಣ್ಣು ರಾಮೇಶ್ವರ



ನೋಡ್ತಿರ್ತದೆ ಅಂತ ಯಾವಾಗಲೂ ಹೇಳ್ತಿದ್ರಿ ಅಲ್ವ. ನನಗೇನೂ ಗೊತ್ತಾಗೋದೇ ಇಲ್ಲ!'– ಇಷ್ಟನ್ನು ಹೇಳುತ್ತಿರುವಾಗ ನಾನು ಮಾಡುತ್ತಿದ್ದ ಕಣ್ಣು ಸನ್ನೆ, ಬಾಯಿಸನ್ನೆಗಳನ್ನು ಅವನು ಪೂರ್ತಿಯಾಗಿ ನಿರ್ಲಕ್ಷಿಸಿ ಬಿಟ್ಟಿದ್ದ. ಪರಿಣಾಮವಾಗಿ ನಾನಂತೂ 'ನಖಶಿಖಾಂತ' ಬೆವರಿ ಬಿಟ್ಟೆ. ರಮೇಶ ಬಾಬು ಸಾಹೇಬರು ಊಟದ ಶಾಸ್ತ್ರ ಮುಗಿಸಿದವರೆ ಹೆಚ್ಚಿನ ಮಾತಿಗೆ ಅವಕಾಶ ನೀಡದೆ, ಬರುತ್ತೇನೆ ಶಾಮ್' ಎಂದು ಹೇಳಿ ಹೊರಟೇ ಹೋದರು. ಮುಂದಿನ ದಿನಗಳಲ್ಲಿ ನಾನು ಮಾಡಲಿರುವ ಅಥವಾ ಮಾಡದಿರುವ ತಪ್ಪುಗಳಿಗಾಗಿ ಎಷ್ಟು ಮೆಮೋಗಳನ್ನು ಬಾಸ್‌ನಿಂದ ಪಡೆಯಲಿಕ್ಕಿದೆಯೋ ಎಂಬ ಬಗ್ಗೆ ನಾನು ಚಿಂತಿಸತೊಡಗಿದೆ.

ಸುಬ್ಬಿ ಮಾತ್ರ ಇವೆಲ್ಲ  ಮಾಮೂಲು–ಎಂಬಂತೆ ಇದ್ದಳು. ಇದರಲ್ಲೆಲ್ಲ ಗುಟ್ಟು ಮಾಡೋದೇನಿದೆ ಎಂಬ ಧೋರಣೆ ಅವಳದ್ದು. 'ನೀವು ಆರಾಧಿಸ್ತಿರೋ ದೈವಾಂಶ ಸಂಭೂತರು ತಮ್ಮ ಗುರುಗಳು ಉಪದೇಶಿಸಿದ ಗೋಪ್ಯ ಮಂತ್ರವನ್ನು ಜಗತ್ತಿಗೇ ಸಾರಿ ಬಿಟ್ಟಿದ್ದರು ಮರೆತು ಬಿಟ್ರಾ?' –ಎಂದೊಮ್ಮೆ ಅಂದಿದ್ದಳು. ಆಕೆ ಹೇಳಿದ್ದು ನಿಜವೇ ಆಗಿತ್ತು. ವಿಶಿಷ್ಟಾದ್ವೈತ ಮತದ ಸಂಸ್ಥಾಪಕರಾದ ಶ್ರೀರಾಮಾನುಜಾಚಾರ್ಯರ ಚರಿತ್ರೆಯನ್ನು

ಸುಬ್ಬಿ ಸಹ ಓದಿದ್ದಳು. ಅದರಲ್ಲಿದ್ದ ಒಂದು ಘಟನೆ ಅವಳಿಗೆ ತುಂಬ ಇಷ್ಟವಾಗಿತ್ತು. ಆಚಾರ್ಯರಿಗೆ ಅವರ ಗುರುಗಳು ಒಂದು ತಿರುಮಂತ್ರವನ್ನು ಬೋಧಿಸಿ, ಅದನ್ನು ಗೋಪ್ಯವಾಗಿಯೇ ಪಠಿಸಬೇಕು. ಅನ್ಯರಿಗೆ ಇದನ್ನು ಬಹಿರಂಗ ಪಡಿಸಬಾರದು; ಈ ರೀತಿ ಗೋಪ್ಯತೆ ಕಾಪಾಡಿ ತಿರುಮಂತ್ರವನ್ನು ಹೇಳಿದವರಿಗೆ ಸ್ವರ್ಗ ಪ್ರಾಪ್ತಿಯಾಗುತ್ತದೆ– ಎಂದೆಲ್ಲ ಹೇಳಿದ ಮೇಲೂ ರಾಮಾನುಜಾಚಾರ್ಯರು ಈ ಗೋಪ್ಯ ಮಂತ್ರವನ್ನು ಸಮಸ್ತರಿಗೆ ಕೇಳುವಂತೆ ಒಂದು ಗೋಪುರದ ಮೇಲೆ ನಿಂತು ಘೋಷಿಸಿಬಿಟ್ಟರಂತೆ. ಸಿಟ್ಟಿಗೆದ್ದ ಗುರುಗಳು ಕಾರಣ ಕೇಳಿದಾಗ ಈ ಮಂತ್ರವನ್ನು ಉಚ್ಚರಿಸುವುದರಿಂದ ಸ್ವರ್ಗ ಪ್ರಾಪ್ತಿ ಎಂದಾದರೆ, ಇದು ನೂರಾರು ಜನರಿಗೆ ಲಭ್ಯವಾಗಲಿ; ಗೋಪ್ಯತೆಯನ್ನು ಕಾಪಾಡದ ನನಗೆ ಮಾತ್ರ ನರಕ ಪ್ರಾಪ್ತಿಯಾಗಲಿ' ಎಂಬ ಆದರ್ಶದ ಮಾತುಗಳನ್ನಾಡಿದರಂತೆ.

ಅಂತಹ ಶ್ರೇಷ್ಠ ಮತಸ್ಥಾಪಕರೇ ಗೋಪ್ಯತೆಗೆ ಮಹತ್ವ ನೀಡಲಿಲ್ಲ– ಎಂದಾದ ಮೇಲೆ ನಮ್ಮಂತಹವರು ಯಾಕಾಗಿ 'ಗುಟ್ಟುಗುಟ್ಟು' ಅಂದುಕೊಳ್ಳುತ್ತಾ ಮನಬಿಚ್ಚಿ ಮಾತಾಡೋದಕ್ಕೂ ಹಿಂಜರಿಯಬೇಕು?' ಎಂಬುದು ಸುಬ್ಬಿಯ ವಾದ.

'ಅದು ಸರಿ ಬಿಡು! ಹಾಗಾದರೆ ನಿನ್ನ ತಮ್ಮ ರಘು ಮೊನ್ನೆ ಪಿ.ಯು.ಸಿ. ಪರೀಕ್ಷೆಗೆ ಮೂರನೇ ಸಲ ಕೂತಾಗಲೂ ಡುಮ್ಕಿ ಹೊಡೆದಿದ್ದಾನಲ್ವ! ಇದರ ವಿಷಯ ಬಹಳ ಮೆತ್ತಗೆ ನೀನು ಮಾತಾಡಿ ನಿನ್ನಮ್ಮನಿಗೆ ಸಮಾಧಾನ ಪಡಿಸೋದನ್ನು ನಾನು ಸ್ವಲ್ಪ ಕೇಳಿಸ್ಕೊಂಡೆ. ಈ ಸುದ್ದಿಯನ್ನು ಫೇಸ್ ಬುಕ್‌ನಲ್ಲಿ ಹಾಕಿ ಜಾಹೀರುಪಡಿಸೋಣವಾ ಹೇಗೆ?'ಅಂತ ನಾನು ಕೇಳಿದೆ.

ಸೌ। ಸುಭದ್ರಾ ಉರುಫ್ ಸುಬ್ಬಿ ಈಗ ನಿರುತ್ತರೆ!

## ಅಪರಂಜಿಯ ನಮನ

ಅಪರಂಜಿಯನ್ನು ಮೆಚ್ಚಿ ಅವಳ ಸದೃಢ ಭವಿಷ್ಯಕ್ಕಾಗಿ ನಮ್ಮ ಚಂದಾದಾರರಲ್ಲೊಬ್ಬರಾದ ಶ್ರೀ ಸಿ.ಆರ್. ಅನಂತ ಪ್ರಕಾಶ್ ಅವರು ಐದು ಸಾವಿರ ರೂಪಾಯಿ ಕಾಣಿಕೆ ನೀಡಿದ್ದಾರೆ. ಈ ಮಹನೀಯರಿಗೆ ಅಪರಂಜಿ ಬಳಗದ ಪರವಾಗಿ ವಂದನೆಗಳು. ಇದೇ ರೀತಿಯ ಸಹಾಯ ಸಹಕಾರಗಳು ಇತರ ನಲ್ಮೆಯ ಅಭಿಮಾನಿಗಳಿಂದ ಬರುವಂತಾದರೆ ಅಪರಂಜಿಯ ಸಂತಸದ ಬಟ್ಟಲು ತುಂಬಿ ಹರಿಯುವುದರಲ್ಲಿ ಸಂದೇಹವಿಲ್ಲ.

# ನನ್ನ ರಿಟೈರ್‌ಮೆಂಟ್ ಪ್ಲಾನ್

• ಮಾಲತಿ ಮುದಕವಿ

ನಾನು ಒಂದು ಸರಕಾರಿ ಕಛೇರಿಯಲ್ಲಿ ಲೇಖಪಾಲನಾಗಿದ್ದು ಮೊನ್ನೆ ಮೊನ್ನೆ ಅಂದರೆ ಹೋದ ತಿಂಗಳೇ ರಿಟಾಯರ್ ಆಗಿದ್ದೇನೆ. ಈಗ ನನಗೆ ಮಾಡಲು ಕೆಲಸವಿಲ್ಲ.. ಕೆಲಸವಿಲ್ಲದೆ ಊಟ ಕತ್ತರಿಸುವವರಿಗೆ ಎಷ್ಟು ಮರ್ಯಾದೆ ಎನ್ನುವುದು ಎಲ್ಲರಿಗೂ ಅನುಭವಕ್ಕೆ ಬಂದ ಮಾತು.. ನನಗೆ ಪೆನ್ಶನ್ ಬರುವುದರಿಂದ ನಾನೇನು ಪುಕ್ಕಟೆ ಊಟ ಮಾಡುವವರ ಸಾಲಿಗೆ ಸೇರುವುದಿಲ್ಲ.. ಆದರೂ ಈಗ ನನಗೆ ಉಂಟಾದ ಕೆಲವು ಸಣ್ಣ ಪುಟ್ಟ ಅನುಭವಗಳಿಂದಾಗಿ ನನಗೆ ಪೆನ್ಶನ್ ಬರುವುದಾದರೂ ನಿಜವೋ ಸುಳ್ಳೋ ಎಂದು ಸಂಶಯ ಬರುತ್ತಲಿದೆ..

> ನಾ ಬೇಡಿದಾಗ ಸಿಗಲಿಲ್ಲಾ ಅಂದ್ರ ನನಗ ಒಂದಿಷ್ಟು ನನ್ನ ಕಿಮ್ಮತ್ ಕಡಿಮೀ ಆಥಂಗ ಅನಸಂಗಿಲ್ಲೇನು?

ಅದರಲ್ಲಿ ನನ್ನ ಅಭಿಮಾನಕ್ಕೆ ಪೆಟ್ಟು ಕೊಟ್ಟ ಕೆಲವು ಅನುಭವಗಳು ಹೀಗಿವೆ.. ಈಗ ನನಗೆ ನನ್ನ ಹೆಂಡತಿ ಬೇಗ ಎದ್ದು ಚಹ ಮಾಡಿಕೊಡುವುದನ್ನು ಬಿಟ್ಟು ಬಿಟ್ಟಿದ್ದಾಳೆ. ಕಾರಣ ಕೇಳಿದರೆ, "ಅಯ್ಯ, ಈಗ ಲಗೂನ ಎದ್ದು ನಿಮಗ ಎಲ್ಲೆ ಹೋಗಬೇಕಾಗೇದ... ನಿಮ್ಮ ನೌಕರಿ ಇರೂತನಾ ಗಾಣದೆತ್ತಿನ್ಹಂಗ ಮುಂಜಾನಿಂದ ಸಂಜೀತನಕಾ ದುಡಿಯೂದಾತು... ಈಗರೆ ಮುಂಜಾನೆ ಕಣ್ಣುತುಂಬ ನಿದ್ದೀ ಮಾಡಲಿಕ್ಕೆ ಬಿಡ್ರಿ."..ಎಂದು ಜೋರು ಮಾಡುತ್ತಾಳೆ.. ನಾನು ಏನಾದರೂ ಅವಳಿಗೆ ಅಂದೆನೋ, ಸುರು.. ಗಂಗಾ ಯಮುನಾ..ಜೊಡೀ ವಾಲಗಾ.. ಹೊರಗಿನ ರೂಮಿನ್ಯಾಗ ಮಲಗಿದ ಮಗಾ ಕಣ್ಣು ತಿಕ್ಕೋತ ಬಂದು,

"ಅಪ್ಪಾ, ನನಗ ರಾತ್ರೀ ಭಾಳೊತ್ತನಕಾ ಕೆಲಸ ಆಗಿರತದ.. ಮುಂಜಾನೆ ಮಲಕೊಳ್ಳಿಕ್ಕೆ ಬಿಡಲಾರದ್ಹಂಗ .." ಎಂದರೆ ಮರ್ಯಾದಿ ಏನಾಥಂಗ? ನೀವ ಹೇಳ್ರಿ..

ಈಗ ನನ್ನ ಪಸಂದಿನ ತಿನಸು, ಅಡಿಗಿ ಏನೂ ಮನ್ಯಾಗ ಆಗಂಗಿಲ್ಲಾ. ಯಾಕ ಅಂತ ಕೇಳ್ತೀರಾ..

"ನನಗ ಇವತ್ತ ಉದ್ದಿನ ವಡಾ ತಿನಬೇಕನ್ನಿಸೇದ.."

"ಅಲ್ಲಾ.. ಬರಬರತ ಸಣ್ಣ ಹುಡುಗ ಆಗತೀರೇನು.. ಮದಲ ಥಂಡಿ ಸುರೂ ಅಗೇದ.. ಅಂಥಾದರಾಗ ಕರದದ್ದ ತಿಂದು ಕೆಮ್ಮು ಬಂದ್ರ ಏನ ಮಾಡೋದು.. ಸುಮ್ಮನ ದಿನದ ಅಡಿಗೀ ಉಂಡು ರಾಮಾ ಕೃಷ್ಣಾ ಅಂತ ಅರಾಮ ಇರ್ರಿ.. ವಯಸ್ಸಾಥಂಗ ತಡಕೊಳ್ಳೋ ಶಕ್ತೀನೂ ಕಡಿಮೀ ಆಗಿರತದ.."

ಅದನ ಮಗಾ ಕೇಳಿದ್ರ ಸಂಜೀ ಅನ್ನೂದರಾಗ ಘಮಾ ಘಮಾ ವಡೀ ಹಾಜರ್. ನನಗ ಕೊಡಂಗಿಲ್ಲಾ ಅಂತೇನಿಲ್ಲಾ. ಆದರೂ ನಾ ಬೇಡಿದಾಗ ಸಿಗಲಿಲ್ಲಾ ಅಂದ್ರ ನನಗ ಒಂದಿಷ್ಟು ನನ್ನ ಕಿಮ್ಮತ್ ಕಡಿಮೀ ಆಥಂಗ ಅನಸಂಗಿಲ್ಲೇನು ನೀವ ಹೇಳ್ರೆಲಾ..

ನನಗ ಇದನೆಲ್ಲಾ ನೊಡಿ ನನ್ನ ಕಿಮ್ಮತ್ ಹೆಚ್ಚ ಆಗೋ ಹಂಗ ಏನರೆ ಮಾಡಬೇಕನಿಸ್ತು.. ಬ್ಯಾರೆ ಏನರೆ ನೌಕರೀ ಹಿಡೀಲೇನೂ ಅಂತ ವಿಚಾರ ತಲ್ಯಾಗ ಬಂತು.. ಆದರ ಇರೋ ನೌಕರೀನ ಕಡಿಕಡೀಕೆ ಬ್ಯಾಸರ ಪಟಗೊಂಡು ಮಾಡಿದ್ದೆ.. ನಾಕ ವರ್ಷದ ಹಿಂದನ ವಿ



ಅರ್ ಎಸ್. ತೊಗೋಬೇಕಂತ ಮಾಡಿದಂವಾ.. ಏನರೆ ಸಮಾಜ ಸೇವಾ ಮಾಡಿದ್ರ ಹೆಂಗ..? ಅದರಾಗೂ ಅನೇಕ ಪ್ರಕಾರ ಅವ.. ಕೆಲವ್ರು ದೇಶ ಸೇವಾ ಅಂತ ದೇಶಾನ ನುಣ್ಣಗ ಬೋಳಿಸಿಬಿಡತಾರ.. ಅದು ಯಾಕೋ ಅಷ್ಟ ಛೊಲೋ ಅನಸಲಿಲ್ಲಾ.. ಇನ್ನ ಕೆಲವ್ರು ಕರ್ಣನ ಜಾತೀಯವ್ರು.. ಮಂದಿ ಸೇವಾ ಮಾಡಿದ್ರೂ ಅದನ್ನ ಮಂದಿ ಹೊಗಳ್ಲಿ ಅಂತ ಆಶಾ ಮಾಡವ್ರಲ್ಲಾ. (ಅಂಥಾ ಮಂದಿ ಈಗೆಲ್ಲಿದ್ದರ? ಔಷಧಕ್ಕ ಸೈತ ಸಿಗಂಗಿಲ್ಲಾ.. ಇನ್ನ ಕೆಲವು ಮಂದಿ ಮೀಡಿಯಾದಾಗ ಪ್ರಸಿದ್ಧ ಆಗಲಿ, ಪೇಪರಿನ್ಯಾಗ ಫೋಟೋ, ಟೀವೀಯೊಳಗ ಮಾರೀ ಬರ್ಲಿ ಅಂತ ಮಾಡತಾರ ಇದನೆಲ್ಲಾ.. ಆದರ ನನಗ ಯಾಕೋ ಅದೆಲ್ಲಾನೂ ಛೊಲೋ ಅನಸಲಿಲ್ಲಾ.. ನಮಗ ಮರ್ಯಾದೀನೂ ಸಿಕ್ಕಿರಬೇಕು..ರೊಕ್ಕಾನೂ ಖರ್ಚ ಆಗಿರಬಾರದು...ಎರಡ ದಿನಾ ತಲೀ ಕೆಡಿಸಿಕೊಂಡೆ... ಅವತ್ತ ಪೇಪರ್ ಓದೂ ಮುಂದ ಐಡಿಯಾ ಹೊಳೀತು.. ಅದಕ್ಕ ಕಾರಣಾ ಅಂದ್ರ ಅವತ್ತ ಒಂದು ಫೋಟೋ ಬಂದಿತ್ತು, ಮಂತ್ರಿ ಮಹೋದಯ ಒಬ್ಬರು ಒಬ್ಬ ಸ್ವಾಮೀಜಿಯವರ ಹತ್ತರ ಆಶೀರ್ವಾದ

ತೊಗೊಳ್ಳೀಕ್ಕ ಹತ್ತಿದ್ದು.. ಅವರ ಎದುರಿಗೆ ದೊಡ್ಡ ಬೆಳ್ಳೀ ತಾಟು.. ತಾಟಿನ ತುಂಬ ಒಂದ ಕಡೆ ನೋಟಿನ ಬಂಡಲ್ಲು.. ಇನ್ನೊಂದ ಕಡೆ ಸೇಬು, ಕಿತ್ತಿ, ದ್ರಾಕ್ಷಿ ಹಣ್ಣಿನ ಗುಂಪಿ...ಮತ್ತ ಮ್ಯಾಲೆ ಮಂತ್ರಿಗಳಷ್ಟ ಅಲ್ಲಾ, ಅವರ ಚೇಲಾಗೋಳೂ ಕೈ ಮುಕ್ಕೊಂಡು ರಾಮಭಕ್ತ ಹನುಮಾನನ ಹಂಗ ನಿಂತಿದ್ದರು! ಅಲಾ ಇವನ.. ಈ ವಿಚಾರ ನನಗ ಮದಲ ಯಾಕ ಹೊಳೀಲಿಲ್ಲಾ.. ಈಗಾಗ್ಲೇ  ಸ್ವಾಮೀಜಿ ಆಗಿಬಿಟ್ಟಿರತಿದ್ದೆನಲಾ ಅಂತ ಮರುಗಿದೆ.. ಇರ್ಲಿ.. ದೇರ್ ಆಯೆ ದುರುಸ್ತ್ ಆಯೆ ಅಂತ ಈಗರೆ ಎಚ್ಚರ ಆತಲಾ ಅನಕೊಂಡು ನನ್ನ ಸಂನ್ಯಾಸೀ ಪಾತ್ರದ ತಯಾರೀ ಸುರೂ ಮಾಡಿದೆ. ಮೊದಲ ಕೊಸ್ಟ್ಯೂಮ್ ಡಿಜಾಯಿನ್ ಮಾಡಬೇಕಲಾ.. ಅವರೂ ಈಗ ಮದಲಿನ ಹಂಗ ಒಂದ ಶ್ಯಾಟೀ ಹೊತಗೊಂಡಾ, ಒಂದ ಶ್ಯಾಟೀ ಉಟಗೊಂಡಾ ಅಂತ ಅನ್ನಂಗಿಲ್ಲಾ.. ಅದರಾಗೂ ನಾನಾ ತರದ ನೂಲು, ರೇಶ್ಮೀ,, ಅಂತೆಲ್ಲಾ ಅವರವರ ಡಿಗ್ನಿಟೀಗೆ ತಕ್ಕಹಂಗ.. ಅಮ್ಯಾಲೆ ಕೆಲವ್ರು ಬರೇ ಬಿಕಿನೀ ಹಂಗ ಮೂರಿಂಚ ಕೆಳಗ, ಮ್ಯಾಲೆ ಖುಲ್ಲಾ..ಇರತಾರ.. ಅಂಥಾದ್ರಾಗ ಮತ್ತ ಗಜಮ್ ಬ್ಯಾರೇ ನಿಂತಿರತಾರ! ಅದ್ಯಾಕೋ ನನಗ ಸಮಾ ಅನಸಲಿಲ್ಲಾ.. ಅದಕ್ಕೂ ಸಿನೆಮಾ ಹುಡಿಗೇರ ಹಂಗ ಫಿಗರ್ ಬೇಕಾಗತದ.. ಡೊಳ್ಳು ಹೊಟ್ಟೀ ಬಿಟಗೊಂಡು ಮೈಮ್ಯಾಲೆ ಮೂರಿಂಚ ಅರಿವೀ ಹಾಕ್ಕೊಂಡ್ರ ಕ್ಯಾಕರಿಸಿ ಉಗಳತಾರ ಅನಿಸ್ತು. ಆ ಐಡಿಯಾ ಬಿಟಗೊಟ್ಟೆ.  ಮೈತುಂಬಾ ಕ್ಯಾವೀ ಬಣ್ಣದ ಅರಿವೀ ಹಾಕ್ಕೊಳ್ಳೋದು ಅಂತ ಡಿಸೈಡ್ ಮಾಡಿಯೂ ಆಯ್ತು. ಇನ್ನ ಮುಂದಿಂದು ಆಭರಣದ ವಿಷಯಾ. ಈಗಿನ ಸ್ವಾಮಿಗೋಳು ಕೊಳ್ಳಾಗ ಬಪ್ಪಿ ಲಾಹಿರೀ ಸೈತ ನಾಚೂ ಹಂಗ ಸರಾ–ದೊಡ್ಡು ದೊಡ್ಡೂ ರುದ್ರಾಕ್ಷೀ ಘಟಾಯಿಸಿದ್ದು, ಕೈಯಾಗ ದಪ್ಪನೀ ನಾಗರಮುಖದ ಕಡಗಾ, ಹಿಂಗೆಲ್ಲಾ. ಆದರ, ನನ್ನ ಹತ್ತರ ಅಷ್ಟು ಭಂಗಾರ ಎಲ್ಲಿಂದ ಬರಬೇಕು? ನನ್ನ ಕೈಹಿಡದಾಕಿ ಕಡಿಂದನ ಎಷ್ಟೋ ಸರ್ತಿ "ತಾಳಿ ಮಣೀ ಮ್ಯಾಲೆ ಬ್ಯಾಳೀ ಮಣಿ ಕಂಡಿಲ್ಲಾ" ಅಂತ ಬೈಸಿಕೊಂಡೇನಿ. ಹಂಗ ತೀರಾ ಆಕೀ ಹೇಳೂ ಹಂಗ ಇಲ್ಲದೇದ್ದರೂ.

ಇನ್ನ ನನ್ನ ಆಶ್ರಮಾ.. ಅದಕ್ಕೊಂದು ಜಾಗಾ ಬ್ಯಾಡ? ನನಗ ಯಾಕೋ ವ್ಯಾಪಾರ ಕುದರೋ ಹಂಗ ಕಾಣ್ಲಿಲ್ಲಾ.. ಯಾಕಂದರ ನನಗಂತೂ ನನ್ನ ಇಡೀ ಸರ್ವಿಸಿನ್ಯಾಗ 30*40 ರ ಒಂದು ಎರಡ ಬೆಡ್ ರೂಮಿನ ಮನೀ ಬಿಟ್ಟರ ಬ್ಯಾರೇ ಏನೂ ಮಾಡಲಿಕ್ಕೆ ಆಗ್ಲಿಲ್ಲಾ. ಯಾರದರೇ ಒಪಿನಿಯನ್ ಪಡೀಬೇಕು ಅಂತ ವಿಚಾರ ಮಾಡಿ ನನ್ನ ಚಡ್ಡೀ ದೋಸ್ತು ಗುಂಡ್ಯಾಗ ತಾಬಡೋಬಡ ಬಾ ಅಂತ ಫೋನ್ ಮಾಡಿದೆ. ಅಂವಾ ಬಂದಾ.

"ಯಾಕೋ, ಅಂಥಾ ಅರ್ಜೆಂಟ್ ಕೆಲಸೇನದ.." ಅನಕೋತ...

"ಬಾರಪಾ.. ನೀ ಒಬ್ಬಾಂವನ ನೋಡು ನನ್ನ ಕಷ್ಟಾ ಸುಖಾ ತಿಳಕೊಳ್ಳೋವಾ.."

ಎನ್ನುತ್ತ ಅವನನ್ನು ಸ್ವಾಗತಿಸಿದ್ದೆ. ಅವನದು ದೊಡ್ಡ ತೋಟದ ಮನಿ ಇರೋದು ನಂಗ ಗೊತ್ತಿತ್ತು. ಅಲ್ಲೆ ನಂಗ ಒಂದು 20*20 ರ ರೂಮನ್ನು ಕೊಡತೀಯೇನಪಾ ಅಂತ ಕೇಳಬೇಕಂತ ನನ್ನ ಮನಸಿನ್ಯಾಗಿತ್ತು. ಅವನ್ನ ಕೇಳಿದ್ರ  ಅಂವಾ ಇಲ್ಲಾ ಅನಲಿಕ್ಕಿಲ್ಲಾ ಅಂತನೂ ಆಶಾ. ಆದರ ಅಂವಾ ಇಡೀ ಮನೀನ ನನಗ ಬಿಟ್ಟ ಕೊಡಲಿಕ್ಕೆ ಒಪಿಗೊಂಡಾ.. ಅದೂ ಬಿನ್ ಬಾಡಿಗಿ! ಒಂದ ಶರತ್ತು ಏನಂದರ ಅಂವಾನೂ ವಾರದಾಗ ಎರಡ ದಿನಾ ನಮ್ಮ ಆಶ್ರಮಕ್ಕ ಬರೋದಕ್ಕ ನಾ ಅವಕಾಶ ಕೊಡಬೇಕೂ ಅಂತ. ನನಗ ಒಳಗೊಳಗ ಅವನ ಹೆಂಡತಿನ್ನ ಹೆಂಗ ಎದರಿಸೋದು ಅಂತ ಹೆದರಿಕಿ ಆತು. ಆದರೂ ಮುಂದಿಂದು ಮುಂದ ಅಂತ ಸುಮ್ಮನಾದೆ. ಅವನ್ನ ನನ್ನ ಸೆಕ್ರೆಟರೀ ಅಂತನೂ ಘೋಷಣಾ ಮಾಡಿದೆ. ಇದನ್ನ ಕಾರ್ಯರೂಪಕ್ಕ ತರೋದೊಂದ ಉಳೀತು. ನಾ ಸಂನ್ಯಾಸಿ ಆಗೋದನ್ನ

ಅಲ್ಲಲ್ಲಾ ಬಾಬಾ ಆಗೋದನ್ನ ನಮ್ಮವ್ರು ಹೆಂಗ ಸ್ವೀಕಾರ ಮಾಡಬಹುದು ಅಂತ ನೆನಸಿ ಹೆದರಿಕಿನೂ ಆತು. ಅದರ ನಾ ತಿಳಕೊಂಡಹಂಗ ಯಾರೂ ಪ್ರತಿಕ್ರಿಯಾ ಮಾಡ್ಲಿಲ್ಲಾ. ನನ್ನ ಹೆಂಡತಿ "ಛೊಲೋ ಆತ್ರೀ.. ರಿಟಾಯರ್ ಆದಿಂದ ಏನೂ ಮಾಡದ ಸುಮ್ಮನ ನೊಣಾ ಹೊಡೀತಿದ್ದರ ಸಣ್ಣ ಕೂಸು ಸೈತ ಮರ್ಯಾದಿ ಕೊಡಂಗಿಲ್ಲಾ.. ಈ ಉದ್ಯೋಗ ಏನದ ಅಲಾ, ಇದರಿಂದ ನಿಮಗ ಯಾವದ ಶ್ರಮಾ ಇಲ್ಲದ ರೊಕ್ಕಾ, ಮರ್ಯಾದಿ ಎಲ್ಲಾ ಸಿಗತದ. ನನಗೂ ಸೈತ ಮಂದಿ ಅವ್ವನೌರು ಅಂತ ನಮಸ್ಕಾರ ಮಾಡಿ ಸೀರಿ, ಕುಬಸಾ, ಹಣ್ಣು-ಹಂಪಲಾ ದಾನಾ ಮಾಡತಾರ. ನಿಮಗಂತೂ ಬೆಳ್ಳಿ-ಬಂಗಾರಾ, ಧೋತರಾ, ಶಾಲು.. ಎಲ್ಲಾ ಸಿಗತದ. ಮಕ್ಕಳ ಹಂಗಿನ್ಯಾಗ ಇರೋದೂ ತಪ್ಪತದ." ಅಂತ ಅಂದ್ಲು. ಅಲ್ಲಿಗೆ ಒಂದು ಚಿಂತಿ ಬಗಿಹರೀತು. ಮಕ್ಕಳಂತೂ ಈ ಮುದುಕಾ-ಮುದುಕಿ ಯಾವದ ತ್ರಾಸಿಲ್ಲದ ದೂರ ಹೋಗತಾರ, ಇನ್ನ ಮುಂದ ನಮ್ಮನ್ನ ಮದಿವಿ ಮಾಡಿಕೊಳ್ಳಿಕ್ಕೂ ಭಾಳಷ್ಟು ಛೊಲೋ ಕನ್ಯಾ ಬರತಾವು ಅಂತ ಖುಶಿ ಪಟ್ಟರು.

ಸ್ವಾಮಿಗೋಳನ ಭೆಟ್ಟಿ ಮಾಡಲಿಕ್ಕೆ ವಾರದಾಗ ಮೂರ ದಿನಾ ಅಂತ ಟೈಮ್ ಫಿಕ್ಸ್ ಮಾಡಿದ್ವಿ ನಾನೂ ಗುಂಡಾ ವಿಚಾರ ಮಾಡಿ. ಉಳದ ಸಮಯದಾಗ ಯೋಗ, ಧ್ಯಾನಾ, ಉಪನ್ಯಾಸ, ದೇಶಾಟನಾ.. ಈಗ ಎಲ್ಲ ಸ್ವಾಮಿಗೋಳು ಒಂದಲ್ಲಾ ಒಂದು ಲಫಡಾದಾಗ ಸಿಕ್ಕಬಿದ್ದಿರೋದನ್ನ ನೆನಪ ಮಾಡಿಕೊಂಡು ನಾ ಅಂಥದರಾಗೆಲ್ಲಾ ಸಿಗಿಬೀಳೋದು ಬ್ಯಾಡಾ ಅಂತ ವಿಚಾರ ಮಾಡಿ, ನಾ ಬಾಯಿ ಹೆಂಗ ಬೇಕ ಹಂಗ ಹರಿಬಿಡೋದು ಬ್ಯಾಡಾ.. ನಮ್ಮ ಆಶ್ರಮದಾಗ ಯಾವುದೆ ವಯಸ್ಸಿನ ಹೆಣ್ಣುಮಕ್ಕಳಿಗೂ ವಸತಿ ಮಾಡಲಿಕ್ಕೆ ಅವಕಾಶ ಕೊಡಬಾರದೂ ಅಂತನೂ ಠರಾವು ಪಾಸು ಮಾಡಿದಿವಿ. ನನ್ನ ಆಲೋಚನೀ ಇಷ್ಟ ಲಗೂನ ಕಾರ್ಯಗತ ಆಗೋ ಹಂತಕ್ಕ ಬಂದದ್ದು ನೋಡಿ ನನಗ ಭಾಳ ಸಂತೋಷ ಆತು. ಖುಶೀಲೆ ಕುಣದಾಡಿಬಿಟ್ಟೆ..

"ರೀ.. ಯಾಕ್ರೀ, ಹಂಗ್ಯಾಕ ಹುಚ್ಚರಹಂಗ ಕುಣದಾಡಲಿಕ್ಕೆ ಹತ್ತೀರಿ ನಿದ್ಯಾಗ? ಹುಚ್ಚರ ಆಸ್ಪತ್ರೀಗೆ ಹೋದಹಂಗ ಏನರೆ ಕನಸ ಬಿತ್ತೇನೂ?.."

ನನ್ನ ಕನಸು ಹರಿದಿತ್ತು.. ಬೆಳಗು ಮೂಡಿತ್ತು..

---

# ಹನಿಗಳು

– ತುರುವೇಕೆರೆ ಪ್ರಸಾದ್

**ಪ್ರಾರ್ಥನೆ!**

ಕೊಡು ತಾಯಿ ಒಂದೇ ವರ!
ಎಂದೂ ಮುಗಿಯುವುದಿಲ್ಲ
ಹೆಂಡತಿಯ ಚಿನ್ನದ ಬರ
ಜ್ಯಾಯ್ ಅಲುಕಾಸು
ಆರ್ ಆರ್ ಪ್ಯಾಲೇಸು
ಕಂಡಾಗ
ಮುಚ್ಚಿಹೋಗಲಿ
ಹೆಂಡತಿಯ ಐಸು!

**ಸುಖಿ–ಓಖಿ!**

ಹೆಂಡತಿ ಹೇಳಿದ ಹಾಗೆ
ಗಂಡ ಕೇಳಿ
ಓಕೆ ಎಂದರೆ ಅವ ಸುಖಿ!
ಇಲ್ಲವಾದರೆ ಪ್ರಾಣಸಖಿ
ಆಗುತ್ತಾಳೆ
ಎಲ್ಲಾ ಗುಡಿಸಿ ಹಾಕುವ
ಚಂಡಮಾರುತ ಓಖಿ!

beechi

TEMPLE OF KNOWLEDGE

DISTANCE EDUCATION

(Govt. & UGC Recognised Universities)

# BEECHI VIDYA KENDRA

ADMISSION OPEN - APPLY NOW

## CENTER OF DISTANCE LEARNING

**MBA WITH 6 SPECIALIZATIONS, MA, M.COM, MCA, MSc-BT, PGDCS, BA & B.COM - AGE BASIS**

Email : admin@beechi.in Web : www.becchi.in

Mob. 9035302302, 9035007003

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

beechi

TEMPLE OF KNOWLEDGE

Email : admin@beechi.in

Web : www.becchi.in

Mob. 9740968677



### ಹಾಸ್ಯದ ಮೇರು ಶಿಖರ

## ಡಾ. ಪ್ರಭುಶಂಕರ ಅವರಿಗೆ

### ಅಪರಂಜಿಯ ಅಶ್ರುತರ್ಪಣ

ಹಾಸ್ಯೋತ್ಸವದ ಪ್ರಾರಂಭದ ದಿನಗಳು. ಎಚ್. ಎನ್. ಕಲಾಕ್ಷೇತ್ರದಲ್ಲಿ ನಾ. ಕಸ್ತೂರಿ ಸಂಸ್ಮರಣೆಯ ಹಾಸ್ಯೋತ್ಸವದಲ್ಲಿ ಪ್ರಮುಖ ಭಾಷಣಕಾರರಾಗಿ ಭಾಗವಹಿಸಿದ್ದ ಡಾ. ಪ್ರಭುಶಂಕರ ಅವರು ನಾ. ಕಸ್ತೂರಿಯವರನ್ನು ಕನ್ನಡ ಜನತೆಗೆ ವಿಶಿಷ್ಟ ರೀತಿಯಲ್ಲಿ ಪರಿಚಯ ಮಾಡಿಕೊಟ್ಟಿದ್ದರು. Thirteen thousand Spartan Dhandigas Nugged into the Battlefield ಅಂತ ಕಸ್ತೂರಿಯವರು ಪಾಠ ಮಾಡಿದ್ದನ್ನು ಡಾ. ಪ್ರಭುಶಂಕರ ಅವರು ಅವರದೇ ಧಾಟಿಯಲ್ಲಿ ಹೇಳಿದ್ದಾಗ ನೆರದಿದ್ದ ಸಾವಿರಕ್ಕೂ ಅಧಿಕ ಮಂದಿ ಒಂದೇ ಬಾರಿಗೆ ನಕ್ಕಿದ್ದರು. ಅದು ಡಾ. ಪ್ರಭುಶಂಕರ ಅವರ ವಿಶಿಷ್ಟ ಶೈಲಿ. ಅಂದಿನಿಂದ ಅವರು ಅಪರಂಜಿಯ ಅಭಿಮಾನಿಗಳಾಗಿ ನಮ್ಮನ್ನೆಲ್ಲಾ ವಿಶೇಷ ಮಮತೆಯಿಂದ ಕಾಣುತ್ತಿದ್ದರು. ಎರಡು ವರ್ಷಗಳ ಹಿಂದೆ ಮೈಸೂರಿನಲ್ಲಿ ಅಪರಂಜಿ ಹಬ್ಬ ನಡೆದಾಗ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿ ಹಾಸ್ಯದ ತುಣುಕುಗಳಿಗೆ ಮನಬಿಚ್ಚಿ ನಕ್ಕಿದ್ದರು. ಇತ್ತೀಚೆಗೆ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಡಾ. ಪ್ರಭುಶಂಕರ ಅವರು ನಮ್ಮನ್ನು ಅಗಲಿದ್ದು, ಕನ್ನಡ ಸಾರಸ್ವತ ಲೋಕಕ್ಕೆ, ಹಾಸ್ಯ ಲೋಕಕ್ಕೆ, ವಿಶಿಷ್ಟವಾಗಿ ಅಪರಂಜಿ ಬಳಗಕ್ಕೆ ಒಂದು ಕಹಿ ಸಂಗತಿಯೇ ಸರಿ. ಡಾ. ಪ್ರಭುಶಂಕರ ಅವರು ಭೌತಿಕವಾಗಿ ನಮ್ಮೊಡನೆ ಇರದಿದ್ದರೂ ಅವರ ಕೃತಿಗಳ ಮುಖಾಂತರ ಇನ್ನೂ ಹಲವು ಕಾಲ ನಮ್ಮೊಂದಿಗೆ ಇರುತ್ತಾರೆ. ಡಾ. ಪ್ರಭುಶಂಕರ ಅವರ ಆತ್ಮಕ್ಕೆ ಅಪರಂಜಿ ನೊಂದ ಹೃದಯದಿಂದ ಅಶ್ರುತರ್ಪಣ ಸಲ್ಲಿಸುತ್ತಾಳೆ. (ಮುಂದಿನ ಸಂಚಿಕೆಯಲ್ಲಿ ಡಾ. ಪ್ರಭುಶಂಕರ ಅವರ ವಿಶಿಷ್ಟ ಹಾಸ್ಯದ ಝಲಕ್ ಓದಲು ಸಿದ್ಧರಾಗಿರಿ)

**RAMAIAH**
**Indic Specialty Ayurveda**

**RESTORATION HOSPITAL**

# Ramaiah Ayurveda

- General Medicine
- Pain Clinic
- Dermatology
- Ophthalmology
- Gynaecology & Obstetrics
- Paediatrics
- Geriatrics
- Preventive Medicine (Wellness, Well - Being)
- Yoga
- Ayurvedic Para-Surgical Procedures

Proud to Announce
**NABH Accrediation**



Under the Leadership of
**Prof. Dr. G.G. Gangadharan**

# World Renowned Doctors



First Franchise
Bannerghatta



First Joint Venture
Penang, Malaysia



First Branch
Yelahanka New Town

24/7 Emergency Healthcare
Attached to Memorial Hospital
Spacious in Patient Facility

Free Telephonic Consultation
**080 22183456, 80 99 95 95 95**

New BEL Road, M S Ramaiah Nagar, Bengaluru - 560 054, www.msricaim.com

# ಭಾರತದ ಮೊಟ್ಟಮೊದಲ ಸಾರ್ವಜನಿಕ ಔಷಧ ಪ್ರಯೋಗಾಲಯ ಸಂಸ್ಥೆ



















- ನೀವು ಕುಡಿಯುವ ನೀರು ಶುದ್ಧವೇ?
- ನಿಮ್ಮ ಮಕ್ಕಳ ತಿನಿಸುಗಳಲ್ಲಿ ಹಾನಿಕಾರಕ ಅಂಶಗಳಿವೆಯೇ?
- ನಿಮ್ಮ ಮನೆಯ ಅಂಗಳದಲ್ಲಿ ಅಥವಾ ಹೊಲದ ಮಣ್ಣಿನಲ್ಲಿ ವಿಷಕಾರಿ ಅಂಶವಿದೆಯೇ?
- ನೀವು ಸೇವಿಸುವ ಗಿಡಮೂಲಿಕೆ ಔಷಧಿಗಳಲ್ಲಿ ಹಾನಿಕಾರಕ ಅಂಶವಿದೆಯೇ?
- ಹಾಳಾದ ಅಥವಾ ಕಲಬೆರಕೆ ತಿನಿಸುಗಳ ಭಯವೇ?
- ಮೂತ್ರ, ರಕ್ತದಲ್ಲಿ ವಿಷಕಾರಿ ಅಥವಾ ಖನಿಜಾಂಶಗಳ ಪರೀಕ್ಷೆ ಮಾಡಿಸಬೇಕೆ?

ಈ ಎಲ್ಲಾ ಸಂದೇಹಗಳಿಗೆ ಶೀಘ್ರದಲ್ಲಿ ಉತ್ತರ ಪಡೆಯಲು ಹಾಗೂ ನೀವು ಆರೋಗ್ಯಕರ ಪದಾರ್ಥಗಳನ್ನು ಸೇವಿಸುವಂತಾಗಲು ನೀರು, ಆಹಾರ, ಮಣ್ಣು ಹಾಗೂ ಔಷಧಿಗಳನ್ನು ಪರೀಕ್ಷೆ ಮಾಡಿಸಿ.

RAMAIAH

## RAMAIAH ADVANCED TESTING LAB
## RAMAIAH ADVANCED TRAINING CENTRE

**CERTIFICATE TRAINING PROGRAMS * PROJECTS * P.G. DIPLOMA
ON MODERN METHODS OF ANALYSIS FOR FOOD / DRUG / ENVIRONMENT
FOR GRADUATES & POST-GRADUATES IN SCIENCE, ENGG, PHARMACY, BIO-CHEMISTRY, BIO-TECHNOLOGY**

Opp. Ramaiah Hospital, 80 Ft Road, New BEL Road,Bengaluru – 560 054
Call 9844163329; 080 4091 8017,
E – mail: msrdtl@gmail.com or just drop in!


# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ✓ ಕನ್ನಡಿಯಲ್ಲಿ ನಮ್ಮ ಪ್ರತಿಬಿಂಬದಂತೆ ನಮ್ಮ ಮನಸ್ಸು ಹೃದಯ, ಆತ್ಮ, ಆಲೋಚನೆ ಎಲ್ಲವೂ ಕಾಣುವಂತಿದ್ದರೆ? ಅಂತಹ ಕನ್ನಡಿ ಎಲ್ಲರಲ್ಲೂ ಖಂಡಿತವಾಗಿ ಇದೆ. ಆದ್ದರಿಂದಲೇ ನಮ್ಮ ಎಲ್ಲ ಸರಿ ತಪ್ಪುಗಳು ಬೇರೆಯವರಿಗೆ ತಿಳಿಯದಿದ್ದರೂ ನಮಗೆ ತಿಳಿಯದೆ ಇರಲು ಸಾಧ್ಯವೇ ಇಲ್ಲ.
- ✓ ನಾನು ಮಾಡಿದ ಮೊದಲ ಅಡುಗೆ ಎಂದರೆ ಅನ್ನಕ್ಕೆ ಪುಳಿಯೋಗರೆ ಗೊಜ್ಜು ಹಾಕಿ ಕಲೆಸಿದ್ದು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ✓ ಡೋಂಟ್ ಗೆಟ್ ಸ್ಕೇರ್ಡ್ ವೆನ್ ಆ್ಯಮ್ ಟ್ರೈಯಿಂಗ್ ಟು ಸ್ಕೇರ್ ಯು.
- ✓ ಮನೆಯಲ್ಲಿ ಅಮ್ಮ ಧೈರ್ಯವಾಗಿ ಎದ್ದು ನಿಂತು ಮಾತನಾಡುವವಳಾಗಿದ್ದರೆ ಮಾತ್ರವೇ ಮಗಳಿಗೆ ಧೈರ್ಯದ ಪರಿಚಯವಾಗುವುದು.
- ✓ ಕೋಪ ಎಂಬ ಪವರ್‌ಗೆ ತಾಳ್ಮೆಯೇ ಸ್ಟೆಬಿಲೈಸರ್.
- ✓ ಡಿಪ್ಲೊಮ ಮುಗಿಸಿದ ನಂತರ ಎಂಜನೀಯರಿಂಗ್ ಮಾಡುವುದು ಸತ್ತ ನಂತರ ತಿಥಿ ಮಾಡಿದಂತೆ. ಏನೂ ಪ್ರಯೋಜನ ಇಲ್ಲದಿದ್ದರೂ ಆತ್ಮಕ್ಕೆ ಶಾಂತಿ ಸಿಗುತ್ತದೆ.
- ✓ ಡೋಂಟ್ ಲೆಟ್ ಎ ಫೂಲ್ ಕಿಸ್ ಯು. ಡೋಂಟ್ ಲೆಟ್ ಎ ಕಿಸ್ ಫೂಲ್ ಯು.
- ✓ ಮಾದಕ ವಸ್ತುಗಳ ವಿತರಕರ ಸಮ್ಮೇಳನದಲ್ಲಿ: ಮುಂದಿನ ಭಾಷಣಕಾರರು ಫೇಸ್‌ಬುಕ್ ಸಂಸ್ಥೆಯಿಂದ. ಚಟದ ಬಗ್ಗೆ ಅವರು ಎಲ್ಲವನ್ನೂ ವಿವರಿಸುತ್ತಾರೆ.
- ✓ ಲೋಕಾನುಭವದಲ್ಲಿ ಬೇರು ಬಿಟ್ಟಂತಹ ಕವಿ ಮಾತ್ರ ನಿಜವಾದ ಕವಿತೆಗಳನ್ನು ನೀಡಬಲ್ಲ.
- ✓ ನಾನು ತುಳಿದು ಬಂದ ದಾರಿಗೆ ನನ್ನ ಕಾಲುಗಳಷ್ಟೇ ಕಾರಣವಲ್ಲ. ನನ್ನನ್ನು ಹಿಂದಿನಿಂದ ದಬ್ಬುವ ಕೈಗಳೂ ಇವೆ.
- ✓ ದೇರ್ ಈಸ್ ಅನ್ ಎಕ್ಸ್‌ಪೈರಿ ಡೇಟ್ ಟು ಬ್ಲೇಮ್ ಅವರ್ ಪೇರೆಂಟ್ಸ್.
- ✓ ಪಕ್ಷಿಗಳನ್ನು ನೋಡಬೇಕಾದಲ್ಲಿ ನೀವು ನಿಶ್ಯಬ್ದದ ಒಂದು ಭಾಗವಾಗಬೇಕು.



ಪುಸ್ತಕ ಪರಿಚಯ

# ತುಂತುರು

( ಲೇಖಕರು: ದಂನಆ: ತೇಜು ಪಬ್ಲಿಕೇಷನ್ಸ್: 136 ಪುಟಗಳು: 2018)

ಪರಿಚಯಿಸಿದವರು: **ಶ್ರೀನಿವಾಸ ವೈದ್ಯ**

ತುಂತುರು ನಿಜಕ್ಕೂ ಒಂದು ವಿಶಿಷ್ಟ ಪುಸ್ತಕ. ಮೆಲಕು ಹಾಕುವಂತಹ ಆಯ್ದ ಮಾತುಗಳ ಗುಚ್ಛ. ಇಲ್ಲಿ ನೇರ ಸುಭಾಷಿತಗಳಿವೆ. ರಾಜಕೀಯ ವ್ಯಂಗ್ಯೋಕ್ತಿಗಳಿವೆ. ಸಾಮಾಜಿಕ ಚಾಟೂಕ್ತಿಗಳಿವೆ. ಸಾಹಿತ್ಯ ವಿಮರ್ಶೆಯ ಒಂದೆರಡು ತಿವಿತಗಳಿವೆ. ವ್ಯಕ್ತಿ ವಿಕಸನಕ್ಕೆ ಬೇಕಾಗುವ ಸೋಪಾನಗಳಿವೆ. ತುಂತುರು ಕೃತಿಯಲ್ಲಿ ಏನೆಲ್ಲ ಇದೆ. ರಸಿಕರಿಗಾಗಿ ಒಂದೆರಡು ಪ್ರಚ್ಛನ ಪೋಲಿಮಾತುಗಳೂ ಇವೆ ಮತ್ತು ಇವೆಲ್ಲ ಧ್ವನಿಪೂರ್ವಕವಾಗಿ ಕಾವ್ಯಮಯ ಧಾಟಿಯಲ್ಲಿವೆ.

*ಸ್ವಲ್ಪ ರುಚಿ ನೋಡಿ;*

ನೂರು ಪುಟ ಕಡಿಮೆ ಬರೆದರೂ ಸಹ ಲೇಖಕ ಹೇಳಬೇಕಾದುದೆಲ್ಲವನ್ನೂ ಹೇಳಬಹುದಿತ್ತು.

ಸರ್ಜನ್ ದಿನಾ ಒಂದು ಹಾರ ತೊಗೊಂಡು ಹೊರಡುತ್ತಿದ್ದರು. ಏಕೆ ಎಂದು ಕೇಳಿದರೆ 'ಆಪರೇಷನ್ ಸಕ್ಸಸ್ ಆದರೆ ನನಗೆ ಇಲ್ಲದಿದ್ದರೆ....'

'ಭಾಜಪದ ಪ್ರಣವ ಮುಖರ್ಜಿ ಯಾರು ಗೊತ್ತ ? ಅಡ್ವಾನಿ - ಪ್ರಧಾನಿಯಾಗಲು ಕಾಯುತ್ತಲೇ ಇರುವ ವ್ಯಕ್ತಿ '

'ಕಾಂಗ್ರೆಸ್‌ನವರಿಗೆ ಮಮತಾ ಬ್ಯಾನರ್ಜಿ ದೀದಿ ಅಲ್ಲ, ದಾದಾ. '

'ನಿನ್ನ ಮೂಗು ನನಗೆ ಸಿಕ್ಕಿತು. ಅದು ನನ್ನ ವ್ಯವಹಾರದಲ್ಲಿ.'

'ಟಿ ಈಸ್ ಸೈಲೆಂಟ್ ಇನ್ ರಾಬರ್ಟ್ ವಾದ್ರಾ'

'ಸೀರೆ ಉಟ್ಟರೆ ತೊಂದರೆ ಎಂದು ಅನೇಕ ಹೆಣ್ಣುಮಕ್ಕಳು ಗೊಣಗುತ್ತಾರೆ. ಆದರೆ ಕಿತ್ತೂರು ರಾಣಿ ಚೆನ್ನಮ್ಮ ಸೀರೆ ಉಟ್ಟುಕೊಂಡೇ ಬ್ರಿಟಿಷರನ್ನು ಇದುರಿಸಿದಳು '

(ಈ ಉಕ್ತಿಯನ್ನು ಕೇಳಿದ ನನ್ನ ಮೊಮ್ಮಗಳು 'ಬಹುಶಃ ಪ್ಯಾಂಟ್ ತೊಟ್ಟಿದ್ದರೆ ಗೆಲ್ಲುತ್ತಿದ್ದಳೋ ಏನೋ' ಎಂದಳು )

ಆನಂದರ ಆಯ್ಕೆಗಳಲ್ಲಿ ಮೇಲಿನವು 'ಬೆಸ್ಟ್ ಆಫ್ ಆನಂದ' ಅಲ್ಲ. ಅವರ ಆಯ್ಕೆಗಳೆಲ್ಲವೂ ಬೆಸ್ಟೇ! ಸುಮ್ಮನೇ ಸಹೃದಯರಿಗೆ ರುಚಿ ತೋರಿಸಲು ಕೆಲವನ್ನು ರ್‍ಯಾಂಡಮ್ ಆಗಿ ಹೆಕ್ಕಿದ್ದಷ್ಟೇ.

'ಇದು ಬರೆದದ್ದಲ್ಲ. ಸಂಗ್ರಹಿಸಿದ್ದು. ಕದ್ದಮಾಲು ಎಂದು ಬೇಕಾದರೆ ಎದೆ ತಟ್ಟಿ ಹೇಳಬಲ್ಲೆ' ಎಂದು ಅವರೇ ಬರೆದ ಮುನ್ನುಡಿಯಲ್ಲಿ ಹೇಳಿದ್ದಾರೆ.

ನನಗೆ ಒಂದು ಘಟನೆ ನೆನಪಾಗುತ್ತದೆ.

ಒಂದೆರಡು ದಶಕಗಳ ಹಿಂದೆ ಬೆಂಗಳೂರಿನಲ್ಲಿ ಅಷ್ಟಿಷ್ಟು ಮೈಸೂರು ಉಳಿದುಕೊಂಡಿದ್ದ ದಿನಗಳಲ್ಲಿ; ಬೆಳಗಿನ ವಾಯುವಿಹಾರಕ್ಕೆ ಹೊರಟಿದ್ದ ಕಚ್ಚೆಪಂಚೆಯ ಯಜಮಾನರೂ ಜತೆಯಲ್ಲಿ ಅವರ ಧರ್ಮಾವರಂಗಳೂ ಉದ್ದನೆಯ ಕೋಲಿಗೆ ಕೊಕ್ಕೆ ಸಿಕ್ಕಿಸಿ ತಮ್ಮ ಮನೆ ದೇವರ ಪೂಜೆಗೆಂದು ಅವರಿವರ ಮನೆಯ ಕಾಂಪೌಂಡಿನೊಳಗಿನ ಹೂಗಳನ್ನು ಕಿತ್ತು ಕೈಚೀಲಕ್ಕೆ ಸೇರಿಸಿಕೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಒಂದು ದಿನ ನಾನು ಏನು ಕಾರಣವೋ ಅಷ್ಟು ಬೆಳಗ್ಗೆಯೇ ಎದ್ದವನು ನಮ್ಮ ಕಾಂಪೌಂಡಿನಿಂದಲೇ ಹೂ ಕೀಳುತ್ತಿದ್ದ ಈ ಸುಮ ಚೌರ್ಯವನು ಆಕ್ಷೇಪಿಸುತ್ತ, 'ಯಾಕೆ ಸ್ವಾಮಿ ನಮ್ಮ ಹೂ ಕೀಳುತ್ತೀರಿ?' ಎಂದಾಗ ಆ ಧರ್ಮಾವರಿ ಮುಖ ಗಂಟಿಕ್ಕುತ್ತ 'ಹೂವುಗಳು ಯಾರಿಗೂ ಸೇರಿದ್ದಲ್ಲ. ಅವು ದೇವರ ಪೂಜೆಗೆಂದು ಅವನೇ ಬೆಳೆಸಿದ್ದು ಎಂದು ಹೇಳಿ ಆ ಮುಂಡೇದಕ್ಕೆ' ಎಂದು ಯಜಮಾನರಿಗೆ ತಿವಿದದ್ದು ಕೇಳಿಸಿತು.

ಹಾಗೆಯೇ ಸುಭಾಷಿತಗಳೂ, ಜಾನುಡಿಗಳೂ ಯಾರ ಒಡೆತನಕ್ಕೂ ಸೇರಿದ್ದಲ್ಲ. ಅವುಗಳನ್ನು ಕದಿಯುವ ಪ್ರಶ್ನೆಯೇ ಇಲ್ಲ. ಅವು ಕೈಯಿಂದ ಕೈಗೆ ಸಂಚರಿಸುವ ದುಡ್ಡಿನಂತೆ ತಲೆಯಿಂದ ತಲೆಗೆ ಜಾರಿಕೊಳ್ಳುತ್ತಲೇ ಇರಬೇಕು. ಆಗಲೇ ಅವುಗಳ ಸಾರ್ಥಕ್ಯ. ಅದು ನಿಯಮ.

ಆನಂದರು ಈ ಮಾತಿನ ಮೊಗ್ಗುಗಳನ್ನು ತುಂಬ ಜಾಣ್ಮೆಯಿಂದ ಆಯಿದ್ದಾರೆ. ಅಷ್ಟೇ ಅಲ್ಲ. ಅಲ್ಲಲ್ಲಿ ಅವುಗಳನು ಕೆತ್ತುವ ಬಿದರೀ ಕುಸುರೀ ಕಲಾತ್ಮಕತೆಯನ್ನೂ ಮೆರೆದಿದ್ದಾರೆ.

ಆಯ್ಕೆಯಲ್ಲೂ, ಆಯ್ದುದ್ದನ್ನು ತಿರುಚುವದರಲ್ಲೂ ಆನಂದರ ಉತ್ತಮ ಅಭಿರುಚಿ ಮೆಚ್ಚುವಂತಹದು.

'ಏನೋ ಒಂದಿಷ್ಟು ನೋಡುವಾ' ಎಂದು ಕೈಗೆತ್ತಿಕೊಂಡ ಈ ಕೃತಿ ಒಂದು ಪಿ.ಎಚ್.ಡಿ. ಗೆ ಆಗುವಷ್ಟು ಆಸ್ಥೆಯನ್ನು ಕೆರಳಿಸಿತು.

ನಿಜಕ್ಕೂ ಆನಂದರು ಅಭಿನಂದನಾರ್ಹರು.

---

## ರಾಮ್ ಹನಿಗಳು

– ಎನ್. ರಾಮ್

### ಹೊರೆ

ಎಂಬತ್ತಾಯ್ತು ಇನ್ನೂ ಕಾಣೆ
ಅಜ್ಜನ ಬೆನ್ನಲಿ ಬಾಗು
ಸ್ಕೂಲಿಗ್ಸೇರಿದ್ ವರ್ಷಕ್ಕೇನೇ
ಬಗ್ಹೋಗ್ಬಿಟ್ಟ ರಾಘು
ಕಾರಣ ಸ್ಕೂಲಿನ ಬ್ಯಾಗು

### ನಿಷೇಧ

ಮೋದಿ ಏನ್ಮಹಾ ಮಾಡಿದರು
ಕೇವಲ ನೋಟು ನಿಷೇಧ
ಬ್ಯೂಟಿ ಕಡೆಗೆ ತಿರುಗ್ಬಾರದಂತೆ
ಮಡದಿಯ ನೋಟ ನಿಷೇಧ

# ಮೊನ್ನೆ ಹೀಗಾಯಿತು..

• ಎಚ್. ಗೋಪಾಲಕೃಷ್ಣ

ನಮ್ಮ ದೂರದ ನೆಂಟರೊಬ್ಬರು ನಮ್ಮ ಏರಿಯಾದಲ್ಲೇ ಮನೆ ಕಟ್ಟಿಕೊಂಡು ಎಂಟು ಹತ್ತು ವರ್ಷಗಳಿಂದ ವಾಸ ಮಾಡ್ತಿದಾರೆ. ಆಗಾಗ ನಮ್ಮ ಮನೆಗೂ ಬರ್ತಾರೆ ಮತ್ತು ಯಾವುದಾದರೂ ಪುಸ್ತಕ ತಗೊಂಡು ಓದಿ ಕೊಡ್ತೀನಿ ಅಂತ ಮನೆಗೆ ಒಯ್ಯುತ್ತಾರೆ. ಎರಡು ವಾರದ ನಂತರ ನಾನು ಅವರ ಮನೇಗೆ ಹೋಗುತ್ತೇನೆ. ಪುಸ್ತಕ ಓದಿದ್ರಾ ಅಂತ ವಿಚಾರಿಸಿ ಅಲ್ಲೇ ಟೇಬಲ್ಲಿನ ಮೇಲಿರುವ ಪುಸ್ತಕ ತೆಗೆದುಕೊಂಡು ಹೊರಡುತ್ತೇನೆ. ಈ ನೆವದಲ್ಲಾದರೂ ನೀವು ನಮ್ಮ ಮನೇಗೆ ಬಂದಿರಿ ಅಂತ ಗಂಡ ಹೆಂಡತಿ ಸಂತೋಷ ಪಡುತ್ತಾರೆ ಮತ್ತು ನಾನೂ ಸಂತೋಷ ಪಡುತ್ತೇನೆ, ಪುಸ್ತಕ ಬೇರೆಯವರಿಗೆ ರವಾನೆ ಆಗುವ ಮೊದಲೇ ಅದನ್ನು ವಾಪಸ್ಸು ಪಡೆದ ಕಾರಣಕ್ಕೆ. ಇದು ಅವರು ಏರಿಯಾಕ್ಕೆ ಬಂದು ಸೇರಿಕೊಂಡಾಗಲಿಂದಲೂ ನಡೆದು ಬಂದಿರುವ ಪದ್ಧತಿ.

> **ಬ್ಯಾಗ್ ಸಿಗಲಿಲ್ಲ ಎಂದು ಬಾಕ್ ಕೊಟ್ಟರು. ಆದರೆ...**

ಮೊನ್ನೆ ಮೇನ್‌ರೋಡಿನಲ್ಲಿ ವಾಕಿಂಗ್ ಮುಗಿಸಿಕೊಂಡು ಬರ್ತಾ ಇದ್ದಾಗ ಎದುರಿಗೆ ಈ ನೆಂಟರು ಸಿಕ್ಕಿದರು. ನಿಮ್ಮ ಮನೇಗೇ ಹೊರಟಿದ್ದೆ. . . . ಅಂದರು.

ಬನ್ನಿ ಹೋಗೋಣ, ನಾನೂ ಮನೇಗೇ ಹೋಗ್ತಾ ಇದೀನಿ. . . ಅಂದೆ.

ಇಲ್ಲ ನೀವೇ ಬನ್ನಿ, ನಿಮಗೇನೋ ಕೊಡಬೇಕು. . . ಅಂತ ಅವರ ಮನೇಗೆ ಕರೆದೊಯ್ದರು. ಪಾಪ ಊರಿಂದ ಸ್ವೀಟು ಗೀಟು ತಂದಿರ್ತಾರೆ, ಅದು ಕೊಡ್ತಾರೆ ಅಂತ ನಾನೂ ನಾಯಿಮರಿ ಹಾಗೆ, ಟಿಕೆಟ್ ಆಕಾಂಕ್ಷಿ ಪುಢಾರಿ ಹಾಗೆ ಅವರ ಹಿಂದೆ ಹೋದೆ.

ಮೊನ್ನೆ ಅಟ್ಟ ಕ್ಲೀನು ಮಾಡ್ತಾ ಇದ್ದೆವು. ನಮ್ಮ ಮಾವನ ಕಾಲದ ಕೆಲವು ಪುಸ್ತಕ ಸಿಕ್ಕವು, ಹಳೇ ಪುಸ್ತಕಗಳು. ನಿಮಗೆ ಕೊಡೋಣ ಅಂತ ತೆಗೆದು ಇಟ್ಟಿದೀವಿ. ಮೂಲೆಯಲ್ಲಿ ಇರಿಸಿದ್ದ ಒಂದು ಗಂಟು ತೋರಿಸಿದರು. ಪೇಪರಿನಲ್ಲಿ ಸುತ್ತಿದ್ದ ಪುಸ್ತಕಗಳು.

ಯಾವ ಪುಸ್ತಕ ಇದೆ ಅಂತ ನೋಡಿದ್ರಾ ? ಅಂದೆ.

ಇಲ್ಲ ಅಂತ ತಲೆ ಆಡಿಸಿದರು.

ಪೇಪರಿನ ಬಂಡಲು ಬಿಚ್ಚಿದೆ. ಹುಳ ತಿಂದು ಅರ್ಧ ಜೀರ್ಣವಾಗಿದ್ದ ಕಿಟ್ಟೆಲ್ ಕೋಶದ ನಾಲ್ಕು ಸಂಪುಟ ಪುಸ್ತಕ ಇದ್ದವು, ಜತೇಗೆ ದಪ್ಪನೆಯ ಎರಡು ತಮಿಳು ಪುಸ್ತಕ ಮತ್ತು ಒಂದು ಬೈಬಲ್. ಆ ಕಾಲದಲ್ಲಿ ಇವರಿಗೆ ಯಾರೋ ದಾನ ಮಾಡಿದ್ದು ಬೈಬಲ್ ಅಂತ ಅನಿಸಿತು. ನಮ್ಮ ನೆಂಟನ ಮಾವನ ತಂದೆ ಮದ್ರಾಸಿನಲ್ಲಿ ಕೆಲಸ ಮಾಡ್ತಿದ್ದೋರು, ಅವರು ಈ ಕಿಟ್ಟೆಲ್ ಕೊಂಡಿರಬಹುದು ಅಂತ ಊಹಿಸಿದೆ. ತಮಿಳು ಪುಸ್ತಕ ಯಾವುದು ಅಂತ ಗೊತ್ತಾಗಲಿಲ್ಲ. ನಮ್ಮ ತಮಿಳು ಮನ್ರಂ ಅವರನ್ನ ಕೇಳಿದರೆ ಗೊತ್ತಾಗುತ್ತೆ ಅನಿಸಿತು. ಪುಸ್ತಕಗಳನ್ನು ಮನೆಗೆ ಒಯ್ಯುವುದು ನನ್ನಾಕೆ ವೀಟೋ

ಮಾಡಿದ್ದಾಳೆ. ಆದರೂ ಕೊಂಚ ಧೈರ್ಯವಹಿಸಿ ಮನೇಗೆ ಒಯ್ಯೋಣ ಅಂತ ಅಂದುಕೊಂಡೆ.

ಒಂದು ಬ್ಯಾಗು ಕೊಡಿ ಇದನ್ನ ತೆಗೆದುಕೊಂಡು ಹೋಗೋದಕ್ಕೆ. . . . ಅಂತ ಕೇಳಿದೆ.

ಮನೇಲಿರೋ ಹೆಂಗಸರು ಅವರಿಗೆ ಅಂತ ಇಟ್ಟುಕೊಂಡಿರುವ ಊಟ ತಿಂಡಿ ಬೇಕಾದರೂ ಕೊಡುತ್ತಾರೆ, ಆದರೆ ಬ್ಯಾಗು ಅಂದರೆ ಯಾರೂ ಯಾವ ಹೆಂಡತಿಯೂ ಕೊಡೋಲ್ಲ. ಇದು ನನ್ನ ಅನುಭವ, ನಿಮ್ಮದೂ ಅದೇ ಅಂತ ನನಗೂ ಗೊತ್ತು. ಗಂಡಸು ಬ್ಯಾಗು ಹುಡುಕಿ ಅಡಿಗೆ ಕೋಣೆ ಹೊಕ್ಕ. ಅಲ್ಲಿ ಗಂಡ ಹೆಂಡತೀಗೆ ಗುಸುಗುಸುಗುಸು ಜಗಳ ಆಗಿದ್ದೂ ಆಕೆ ಇಲ್ಲ ಅದು ಕೊಡೋಲ್ಲ ಅಂತ ಹೇಳಿದ್ದೂ ಕಿವಿಗೆ ಬಿತ್ತು. ಬ್ಯಾಗು ಕೊಡಲಿಲ್ಲ ಅಂದರೆ ಈ ಗಂಟು ಇಲ್ಲೇ ಬಿಟ್ಟು ಹೋಗೋದೂ ಅಂತ ಮನಸಿನಲ್ಲೇ ಪ್ಲಾನ್ ಮಾಡುತ್ತಿದ್ದೆ. ಗಂಡಸು ಆಚೆ ಬಂತು, ಅದರ ಹಿಂದೆ ಅವನ ಹೆಂಡತಿ.

ಇದು ಹಿಡಿಸೋ ಬ್ಯಾಗು ಮನೇಲಿ ಇಲ್ಲ. ಒಂದು ರಟ್ಟಿನಡಬ್ಬದಲ್ಲಿ ಹಾಕಿ ಕೊಡ್ತೀನಿ. ಕಟ್ಟಿಕೊಡ್ತೀನಿ, ಕೈಲಿ ಹಿಡಕೊಂಡು ಹೋಗಬಹುದು. . .  ಅಂತ ಗಂಡಸು ದೇಶಾವರಿ ಬೀರಿತು.

ಅಯ್ಯೋ ಅದಕ್ಕೇನು, ಹಾಗೇ ಮಾಡಿ ಅಂತ ನಾನೂ ಡಬಲ್ ದೇಶಾವರಿ ಬೀರಿದೆ. ದೇಶಾವರಿ ಬೀರುವುದರಲ್ಲಿ ನನ್ನ ಬಿಟ್ಟರೆ ಇಲ್ಲ ಅಂತ ನನ್ನ ಫ್ರೆಂಡ್ಸ್ ಸರ್ಕಲ್ಲಿನಲ್ಲಿ, ನನ್ನ ಫ್ಯಾಕ್ಟರಿಯಲ್ಲಿ ನಾನು ಫೇಮಸ್ಸು.

ಪುಸ್ತಕ ರಟ್ಟಿನ ಬಾಕ್ಸಿಗೆ ಇರುಕಿಕೊಂಡಿತು. ಅದಕ್ಕೆ ಒಂದು ಹಗ್ಗ ಕಟ್ಟಿ ಕೈಲಿ ಹಿಡಿದುಕೊಂಡು ಹೋಗುವ ಹಾಗೆ ಗಂಡಸು ಕೊಟ್ಟ. ಕಾಫಿ ಆಗಿತ್ತು. ಬರ್ತೀನಿ ಅಂತ ಹೊರಟೆ.

ಇದು ಎಪಿಸೋಡಿನ ಮೊದಲ ಭಾಗ.

ಅವರ ಮನೆಯಿಂದ ಮೇನ್‌ರೋಡಿಗೆ ಬಂದ್ನಾ ? ಎದುರಿಗೆ ಬರೋರೆಲ್ಲಾ ನನ್ನ ಕೈಲಿನ ಡಬ್ಬ ನೋಡ್ತಾ ಇದಾರೆ ಅನ್ನೋ ಭಾವನೆ ಬಂತು. ಕೆಲವರು ಪಕ್ಕಕ್ಕೆ ತಿರುಗಿ ನನಗೆ ಕಾಣದ ಹಾಗೆ ಹಲ್ಲು ಕಿಸಕೊಂಡರು ಅನಿಸಿತು. ತರಲೆ ಮುಂಡೇವು ಅವಕ್ಕೆ ಯಾವೋನೂ ಕಿಟ್ಟೆಲ್ ಕೊಟ್ಟಿಲ್ಲ ಅದಕ್ಕೇ ಕಿಸೀತಿವೆ ಅಂತ ನಾನೂ ಮುಂದೆ ಹೆಜ್ಜೆ ಜೋರಾಗೇ ಇಟ್ಟೆ. ಯಾರೋ ಚಾರ್ ಅಂದರು. ನಿಂತೆ. ಎನ್ನಾ ? ಅಂದೆ. ಯಾರಾದರೂ ಚಾರ್ ಅಂದರೆ ನಾನು ತಮಿಳಿನಲ್ಲೇ ಮಾತಾಡೋದು. ಏಕಪ್ಪಾ ಕನ್ನಡ ಬರೋದಿಲ್ವೇ ಅಂತ ಮೊದಲು ಕೇಳುತ್ತಿದ್ದೆ. ಬೆಂಗಳೂರಿನಲ್ಲಿ ಇಷ್ಟು ವರ್ಷದಿಂದ ಇದೀಯಾ ತಮಿಳು ಬರೋಲ್ವೇ ಅಂಥ ಅವರು ಬೈದುಬೈದೂ ಈಗ ನಾನು ತಮಿಳು ಎಕ್ಸ್‌ಪರ್ಟ್ ಆಗಿದ್ದೀನಿ. ಮುಂದೆ ನನಗೂ ಅವರಿಗೂ ನಡೆದ ಸಂಭಾಷಣೆ  ನಮ್ಮ ಭಾಷೇಲಿ ಹೇಳ್ತೀನಿ.

ಇದು ಯಾರು ಕೊಟ್ಟರು ?

ನನ್ನ ನೆಂಟರ ಹೆಸರು ಹೇಳಿದೆ.

ಅವರ ಮನೆ ಎಲ್ಲಿ?

ಅವರ ಮನೆ ಗುರುತು ಹೇಳಿದೆ. ಇಪ್ಪಡಿ ನೇರ ಪೋ, ಇಂಗೆ ಲೆಫ್ಟ್ ಎಡು, ಅಪ್ರುಮ ರೈಟ್ ಎಡು. . . .ಅಪ್ರುಮ ಎಡ ಪೋ ಅಂಗೆ ಒರುಕಡಿ ಇರ್ಕ್ಕಿ. . . . . . ಅಂತ ವಿವರಣೆ ನೀಡಿದೆ.

ಸರಿ ಚಾ . . . . ಅಂತ ಆತ ಓಡಿದ.

ಮನೇಗೆ ಬಂದು ಕೋಣೆಯ ಮೂಲೆಯಲ್ಲಿ ಮಂಚದ ಕೆಳಗೆ ರಟ್ಟಿನ ಡಬ್ಬ ಇಟ್ಟೆ, ಹೆಂಡತಿಯ ಕಣ್ಣಿಗೆ ಬೀಳದ ಹಾಗೆ. ವಾಕಿಂಗ್ ಆದಮೇಲೆ ಸ್ನಾನ ಇಲ್ಲ ಅಂದರೆ ಹೇಗೇ? ಸ್ನಾನಕ್ಕೆ ಅಂತ ಬಚ್ಚಲು ಹೊಕ್ಕು ಯಮುನೇಚ ಕಾವೇರೀ ಭಾಗೀರತಿ ಅಂತ ಹೇಳುವ ಹೊತ್ತಿಗೆ ಬಚ್ಚಲು ಬಾಗಿಲ ಬಡಿತ ಜೋರಾಗಿ ಕೇಳಿಸಿತು. ನಿಮ್ಮನ್ನು ಕೇಳಿಕೊಂಡು ನಿಮ್ಮ ನೆಂಟರು ಬಂದಿದಾರೆ, ಇಬ್ಬರು ಪೋಲೀಸೂ ಇದಾರೆ, ಬೇಗ ಆಚೆ ಬನ್ನಿ ಅಂತ ಹುಕುಂ ಆಯಿತು.

ಆಚೆ ಬಂದರೆ ಇಬ್ಬರು ಪೋಲೀಸು, ನನ್ನ ನೆಂಟ ಅವರ ನಡುವಿನಲ್ಲಿ.

ಬನ್ನಿ ಸ್ಟೇಷನ್‌ಗೆ ಅಂದ ಒಬ್ಬ ಪೋಲೀಸು. ನೆಂಟರು ನಡುಗುತ್ತಾ ನಿಂತಿದ್ದರು, ಅವರ ಕಣ್ಣಿನಲ್ಲಿ ನೀರು ಹರೀತಿತ್ತು.

ಯಾಕೆ ಇನ್‌ಸ್ಪೆಕ್ಟರ್ ಸಾರ್. . . ಅಂದೆ ಪೋಲೀಸಿಗೆ. ಇನ್‌ಸ್ಪೆಕ್ಟರ್ ಅಂದರೆ, ಸಾರ್ ಅಂದರೆ ಅವರಿಗೆ ಖುಷಿಯಾಗುತ್ತೆ ಅಂತ ಕೇಳಿದ್ದೆ.

ಹೇಳ್ರೀ.. ಅಂತ ನೆಂಟನ ಕಡೆ ತಿರುಗಿದರು. ನೆಂಟನ ಹೆಂಡತಿ, ಅವನ ಪಕ್ಕಗರ ಬಡಿದ ಹಾಗೆ ತೆಪ್ಪಗೆ ಮೊಟ್ಟ ಮೊದಲ ಬಾರಿ ಅವಳ ಜೀವಮಾನದಲ್ಲೇ ತಲೆ ಮೇಲೆ ಆಕಾಶ ಬಿದ್ದ ಹಾಗೆ ನಿಂತಿದ್ದಳು. ನೋಡಿ ಹಾಯೆನಿಸಿತು. ನನ್ನ ಹೆಂಡತೀಗೂ ಯಾವನಾದರೂ ಪೋಲೀಸು ಹೀಗೆ ಗರ ಬಡಿದ ಹಾಗೆ ನಿಲ್ಲಿಸಬಾರದೇ ಅನಿಸಿತು. ಬರೀ ಆ ಯೋಚನೆಯಿಂದಲೇ ಖುಷಿಯಾಗಿ ಗಟ್ಟಿಯಾಗಿ ಕೇಕೆ ಹಾಕಿಕೊಂಡು ನಗಬೇಕು ಅನಿಸಿತು.

ನೆಂಟ ಮೂಗು ಸೊರ್ ಸೊರ್ ಅನಿಸಿಕೊಂಡು ಹೇಳಿದ್ದರ ತಾತ್ಪರ್ಯ ಏನಪ್ಪಾ ಅಂದರೆ. . . . .

ನಾನು ಅವರ ಮನೆಯಿಂದ ಹೊರಟ ಹತ್ತಿಪ್ಪತ್ತು ನಿಮಿಷಕ್ಕೇ ಅವರ ಮನೆ ಮುಂದೆ ಐವತ್ತು ಜನರ ಗುಂಪು ಸೇರಿತಂತೆ. ಎಲ್ಲರೂ ಕೈಲಿ ವೋಟರ್ ಐಡಿ ಇಟ್ಟುಕೊಂಡಿದ್ದರಂತೆ ಮತ್ತು ಅದನ್ನೂ ಕೈ ಮೇಲೆತ್ತಿ ಆಡಿಸುತ್ತಾ ಎನಕೂ ಕುಡಯ್ಯಾ ಎನಕೂ ಕುಡಯ್ಯಾ ಅಂತ ಖೋರಸ್ ಮಾಡಿದರಂತೆ. ಇವನಿಗೆ ಏನೂ ಗೊತ್ತಾಗಲಿಲ್ಲ. ಈ ಖೋರಸ್ ನಡೀಬೇಕಾದರೇನೇ ಪೋಲೀಸು ಜೀಪು ಬಂತಂತೆ. ಮನೆ ಹುಡುಕಿದರಂತೆ. ಯಾಕೆ ಅಂತ ಇವನಿಗೆ ತಿಳೀದು. ಖೋರಸ್ ಗುಂಪಿನವನು ಇವರ ಮನೆಯಿಂದಲೇ ಬಾಕ್ಸು ಹೋಗಿದ್ದು ಅಂತ ಹೇಳಿದನಂತೆ.

ಏನು ಬಾಕ್ಸು ಯಾರಿಗೆ ಕೊಟ್ಟೆ ಅಲ್ಲೀಗೆ ನಡಿ ಅಂತ ಜೀಪು ಹತ್ತಿಸಿಕೊಂಡು ಇಲ್ಲೀಗೆ ಕರೆದುಕೊಂಡು ಬಂದಿದಾರೆ.

ಇವರು ಕೊಟ್ರಲ್ಲಾ ಬಾಕ್ಸು ಅದೆಲ್ಲಿ. . .  ಅಂತ ಪೋಲೀಸು ರೋಪಾಗಿ ಕೇಳಿದ.

ಒಳಗೆ ಬಂದು ಮಂಚದ ಸಂದಿಯಿಂದ ಬಾಕ್ಸು ಆಚೆ ಎಳೆದೆ. ನೋಡಿ ಇದೇ. . . . ಅಂದೆ.

ಆಚೆ ತಗೊಂಬಾ. . . .ಅಂದರು. ಆಚೆ ಇಟ್ಟೆ.

ಬಾಕ್ಸಿನ ಸುತ್ತಾ ಇಬ್ಬರು ಪೋಲೀಸೂ ಒಂದು ರೌಂಡು ಸುತ್ತಿದರು.

ಬಾಕ್ಸು ಬಿಚ್ಚು ಅಣ್ಣ ಅಂದ ಒಬ್ಬ.

ತಲೆಯಾಡಿಸಿ ಬಾಕ್ಸು ಬಿಚ್ಚಿದೆ. ಒಳಗಿರೋದು ತೆಗಿ ಅಂದ ಇನ್ನೊಬ್ಬ. ಮತ್ತೆ ತಲೆ ಆಡಿಸುತ್ತಲೇ ನಾಲ್ಕು ಸಂಪುಟದ ಕಿಟ್ಟೆಲ್, ಎರಡು ತಮಿಳು ಪುಸ್ತಕ ಆಚೆ ಇಟ್ಟೆ. ಬಗ್ಗಿ ನೋಡಿ ಅದು ಅಂದ. ಅದನ್ನೂ ತೆಗೆದು ಆಚೆ ಇಟ್ಟೆ ಇದು ಬೈಬಲ್ ಅಂದೆ.

ಇದೇನಾ ಅವರು ಕೊಟ್ಟಿದ್ದು ಅಂತ ಗಡುಸಾಗಿ ಕೇಳಿದ .

ಹೌದು ಸಾರ್ ಅಂದೆ.

ಈ ಬಾಕ್ಸಿನಲ್ಲಿ ಯಾಕೆ ಕೊಟ್ಟರು ? ಅಂತ ಕೇಳಿದ.

ಅವರ ಮನೇಲಿ ಬ್ಯಾಗು ಇರಲಿಲ್ಲ ಅಂತ ಮೊದಲಿಂದ, ನಡೆದ ಕಥೆ ಹೇಳಿದೆ.

ಎರಡೂ ಪೋಲಿಸರೂ ಮುಖ ಮುಖ ನೋಡಿಕೊಂಡು ಮೀಸೆಯಲ್ಲೇ ನಕ್ಕರು.

ಬಿಡೋ ನೋಡಿದರೆ ಸಭ್ಯಸ್ಥರ ಹಾಗಿದಾರೆ ಅಂತ ಹೊರಟರು.

ಸಾರ್, ಕುತೂಹಲಕ್ಕೆ ಏನು ಪ್ರಾಬ್ಲಮ್ಮೂ ? ಅಂದೆ.

ನೀವು ತಂದ್ರಲ್ಲಾ ರಟ್ಟಿನ ಪೆಟ್ಟಿಗೆ ಅದರಲ್ಲಿ ಕುಕ್ಕರ್ ಇದೆ, ಅದನ್ನಕೊಡ್ತಿದಾರೆ ಅಂತ ನಮ್ಮ ಸ್ಟೇಷನ್ಗೆ ಫೋನು ಬಂತು. ಎಲೆಕ್ಷನ್ ಟೈಮು ಅಲ್ವಾ . ಹೀಗೆ ಕೊಡೋ ಹಾಗಿಲ್ಲ, ಹೋಗಿ ಎಳಕೊಂಡು ಬಾ ಲಾಕಪ್ಪಿಗೆ ಹಾಕೋಣ ಅಂದರು ಸಾಹೇಬರು. ಅದಕ್ಕೇ ಚೆಕ್ ಮಾಡೋಕ್ಕೇ ಬಂದೆವು. . . . ಅಂದರು.

ಪೆಟ್ಟಿಗೆ ಕಡೆ ನೋಡಿದರೆ ಅದರ ಮೇಲೆ ಯಾವುದೋ ಬ್ರಾಂಡೆಡ್ ಕುಕ್ಕರಿನ ಚಿತ್ರ ಇರಬೇಕೇ ?

ಪೋಲೀಸರೇನೋ ಹೋದರು. ಆದರೆ ಮುಂದೆ ಮನೇಲಿ ನಮ್ಮ ಮನೇಲಿ ನಾನು ಎದುರಿಸಲಿರುವ ಪರಿಸ್ಥಿತಿ ನೆನೆದು ಮೈ ನಡುಗಿತು. ಅದೇ ಸಮಯದಲ್ಲಿ ನೆಂಟನ ಮನೆಯಲ್ಲಿ ಏನು ಅವಾಂತರ ಆಗಬಹುದು, ಗಂಡ ಹೆಂಡತಿ ಹೇಗೆ ಕಿತ್ತಾಡಬಹುದು ಅನ್ನೋದನ್ನ ನೆನೆಸಿಕೊಂಡೆ. ಪಾಪ ನನ್ನ ಪಾಡು ನಾಯಿ ಪಾಡಾದರೆ ನನಗಿಂತಲೂ ಅವನ ಪಾಡು ಸಾವಿರ ಕಂತ್ರಿ ನಾಯಿ ಪಾಡು ಅನಿಸಬೇಕೇ?

---

# ಹನಿಗಳು

– **ತುರುವೇಕೆರೆ ಪ್ರಸಾದ್**

**ವಾಸಿಯಾಗದ ಕಾಯಿಲೆ!**

ಯೋಗದಿಂದ
ವಾಸಿಯಾಗುತ್ತದಂತೆ
ಎಲ್ಲಾ ಕಾಯಿಲೆ!
ಯಾವುದೇ ಆಸನ
ಹಾಕಿಸಿದರೂ ಗಂಡ
ನೋಡುವುದ ಬಿಟ್ಟಿಲ್ಲ
ಪಕ್ಕದ ಮನೆ ಶ್ಯಾಮಲೆ!

**ಫೇಲ್ ಸ್ಟೇಟಸ್!**

ಹಿಂದೆ ಹುಡುಗರು ಕಾಫಿ ಕುಡಿದು
ವರಪರೀಕ್ಷೆಲಿ ನಪಾಸಾಗಿ
ಹೋಗ್ತಿದ್ರು ವಾಪಸ್!
ಈಗ ಹುಡುಗೀರು
ಕಾಫಿನೂ ಕೊಡ್ದೆ
ಫೇಲ್ ಅಂತ ವಾಟ್ಸಪ್
–ನಲ್ಲಿ ಹಾಕ್ತಾರೆ ಸ್ಟೇಟಸ್!

# ಕಂತು ಪಿತ

• ವೈ.ವಿ.ಗುಂಡೂರಾವ್

[ಜನಾರ್ದನನ ಮನೆಯ ಲಿವಿಂಗ್ ರೂಂ. ಪರದೆ ಎದ್ದ ಕೂಡಲೇ ಯಾರೂ ಇರುವುದಿಲ್ಲ. ಕೆಲವು ಸೆಕೆಂಡುಗಳ ನಂತರ, ಜನಾರ್ದನ ಮತ್ತು ಅವನ ಚಿಕ್ಕಪ್ಪ ಅಂಕಲ್ ವೆಂಕಪ್ಪ ಹೊರಗಿನಿಂದ ಬರುವರು.]

**ಜನಾರ್ದನ:** ಬನ್ನಿ, ಬನ್ನಿ, ಚಿಕ್ಕಪ್ಪ. ಜಲಜಾ! ಜಲಜಾ! ಯಾರು ಬಂದಿದ್ದಾರೆ ನೋಡು.

**ಜಲಜ:** [ಒಳಗಿನಿಂದ ಬಂದು] ಓ! ಅಂಕಲ್! ಯಾವಾಗ ಬಂದಿರಿ? ಚೆನ್ನಾಗಿದ್ದೀರಾ? (ನಮಸ್ಕಾರ)

**ಅಂಕಲ್ ವೆಂಕಪ್ಪ:** ಚೆನ್ನಾಗಿದೀನಮ್ಮಾ.

**ಜನಾರ್ದನ:** ಕೂತ್ಕೊಳಿ ಚಿಕ್ಕಪ್ಪ... ನೋಡಿ... ಇಲ್ಲೇ ನಾವು ಬದುಕೋದು.

**ಅಂ ವೆಂ:** ಬದುಕೋದು?! ಹಾಗಂದರೇನಯ್ಯಾ?

ಜನಾರ್ದನ: ಬದುಕೋದು ಅಂದರೆ, ಇದು ನಮ್ಮ ಲಿವಿಂಗ್ ರೂಂ ಅಂತ.

**ಅಂ ವೆಂ:** ಹಾಗನ್ನು.



ಜನಾರ್ದನ: ಹೇಗಿದೆ ಚಿಕ್ಕಪ್ಪಾ?

**ಅಂ ವೆಂ:** [ಕೂಡುತ್ತಾ] ಫೈನ್..ವೆರಿ ಫೈನ್.. ಸಾಕಷ್ಟು ದೊಡ್ಡದಾಗಿದೇ... ತುಂಬಾ ನೀಟಾಗಿದೇ... ಬಹಾ..ಳ ಚೆನ್ನಾಗಿದೆ.

ಜನಾರ್ದನ ಥ್ಯಾಂಕ್ ಯು.. ಥ್ಯಾಂಕ್ ಯು.. ಥ್ಯಾಂಕ್ ಯು.. ಚಿಕ್ಕಪ್ಪ.

ಜಲಜ ಆಮೇಲೆ ಅಂಕಲ್!... ನಾವಿಲ್ಲೇ ಕೂತ್ಕೊಂಡು ಟಿ.ವಿ. ನೋಡೋದು.

**ಅಂ ವೆಂ:** [ಸುತ್ತಾ ನೋಡುತ್ತಾ] ಟಿ.ವಿ. ನೋಡ್ತೀರಾ?!.. ಎಲ್ಲಿ ಟಿ.ವಿ.? ಕಾಣಿಸ್ತಾನೇ ಇಲ್ಲ?!

ಜಲಜ ಅದೂಊ.... ರಿಪೇರೀಗೆ ಹೋಗಿದೆ. ಮೊನ್ನೆ ಹೋಯಿತು. ನಾಡಿದ್ದು ಬರುತ್ತೆ.

**ಅಂ ವೆಂ:** ಟಿ.ವಿ.ಗ್ಯಾಕಯ್ಯ ದುಡ್ಡು ಹಾಳು ಮಾಡಿದೆ?

ಜನಾರ್ದನ ಏನು ಚಿಕ್ಕಪ್ಪಾ?! ಟಿ.ವಿ.ಗೆ... ದುಡ್ಡು ಹಾಳು!... ಹ..ಹ..ಹ.. ಈ ಮಾತು ಯಾವುದಾದರೂ ಟಿ.ವಿ. ಚಾನೆಲ್ನೋರಿಗೆ ಗೊತ್ತಾದರೆ ಒಂದು ನ್ಯೂಸ್ ಐಟಂ ಮಾಡಿ ದಿನ ಎಲ್ಲಾ ಪ್ರಚಾರ ಮಾಡಿಬಿಡ್ತಾರೆ. ಈಗಿನ ಕಾಲದಲ್ಲಿ ಮನೇಲಿ ಟಿ.ವಿ. ನೋಡದೇ ಇದ್ದರೂ ಪರವಾಗಿಲ್ಲ. ಟಿ.ವಿ. ಇಲ್ಲದಿದ್ದರೆ ಬೀದೀಲಿ ಠೀವಿಯಿಂದ ಓಡಾಡೋದಕ್ಕಾಗಲ್ಲ. ಇವಳಿಗಂತೂ ಪಕ್ಕದಲ್ಲಿ ನಾನಿಲ್ಲದೆ ಇದ್ರೂ ಪರವಾಗಿಲ್ಲ. ಇದುರಿಗೆ ಟಿ.ವಿ. ಇದ್ದು ಬಿಡಬೇಕು.

**ಅಂ ವೆಂ:** [ನಿಟ್ಟುಸಿರು] ಏನೋಪ್ಪಾ!... ನನ್ನಭಿಪ್ರಾಯದಲ್ಲಿ ಈ ಟಿ.ವಿ., ಗಿ.ವಿ.ಎಲ್ಲಾ ಮನುಷ್ಯನ್ನ ನಿಷ್ಕ್ರಿಯನನ್ನಾಗಿ ಮಾಡೋಕಿರೋ ಸಾಧನ... ಅದರಿಂದ ಆಗೋ ಅಲ್ಪ ಪ್ರಯೋಜನಕ್ಕಿಂತ ಅನಾಹುತಾನೇ ಜಾಸ್ತಿ ಅಂತ ಯಾವುದೇ ಚಾನಲ್ ಮುಂದೆ ಘಂಟಾಘೋಷವಾಗಿ ಹೇಳಬಲ್ಲೆ... ಇದೆಲ್ಲಾ ಮಾಡೋಕೆ ಕೆಲಸವಿಲ್ಲದವರು ನೋಡೋ ಕೆಲಸ ಅಂತ ನನ್ನ ಅಭಿಪ್ರಾಯ.

ಜನಾರ್ದನ ಅದಿರಲಿ ಚಿಕ್ಕಪ್ಪ.. ನಮ್ಮ ಮನೆ ಬಗ್ಗೆ ನಮ್ಮ ಅಭಿಪ್ರಾಯ ಹೇಳಲೇ ಇಲ್ಲವಲ್ಲ.

**ಅಂ ವೆಂ:** ಹೇಳಿದೆನಲ್ಲಯ್ಯಾ.. ಫೈನಾಗಿದೆ ಮತ್ತು ವೈನಾಗಿದೆ ಅಂತ. ಈ ಫರ್ನಿಚರ್ರು, ಆ ಕಾರು, ಆ ಟೂ ಇನ್ ಒನ್ನೂ, ಅಲ್ಲದೆ ಆ ಫ್ರಿಜ್ಜೂ.. ಎಲ್ಲಾ ಚೆನ್ನಾಗಿದೆ. ತುಂಬಾ ಸಂತೋಷನಪ್ಪಾ.. ನಿಂತಂದೆ ೩೦ ವರ್ಷದ ಹಿಂದೆ ೩ ವರ್ಷದ ನಿನ್ನನ್ನ ನನ್ನ ಜವಾಬ್ದಾರಿಗೆ ಒಪ್ಪಿಸಿ ಕಣ್ಣು ಮುಚ್ಚಿದಾಗ ನೀನು ಇಷ್ಟು ಮುಂದೆ ಬರ್ತೀಯಾ ಅಂತ ನಾನಾಗಲೀ, ಅವನಾಗಲೀ, ಕನಸು ಕಂಡಿರಲಿಲ್ಲ... ಈಗ ಅವನಿದ್ದಿದ್ದರೆ ಎಷ್ಟು ಸಂತೋಷ ಪಡುತ್ತಿದ್ದನೋ [ದು:ಖ]

ಜಲಜ ನೀವಿದ್ದೀರಲ್ಲಾ ಅಂಕಲ್! ನೀವೇ ಇವರಿಗೆ, ನನಗೆ ತಂದೆ, ತಾಯಿ ಎಲ್ಲಾ. ಅದೂ ಅಲ್ಲದೆ, ಈಗ ನಾವಿರೋ ಸ್ಥಿತಿಗೆ ನೀವೇ ಕಾರಣ. ಇದೆಲ್ಲಾ ನಿಮ್ಮಿಂದಾನೇ ಇನ್‌ಡೈರೆಕ್ಟಾಗಿ ಆಗಿ ನಮಗೆ ಬಂದಿದ್ದು.

**ಅಂ ವೆಂ:** ನನ್ನಿಂದಾನಾ??!!!... ಇನ್‌ಡೈರೆಕ್ಟಾಗಿ? ಅದೇನು ಡೈರೆಕ್ಟಾಗಿ ಹೇಳಮ್ಮ.

ಜಲಜ ಅದೇ ಅಂಕಲ್! ನಮ್ಮ ಮದುವೆ ನಿಮಗಿಷ್ಟಿಲ್ಲದಿದ್ದರೂ, ನೀವು ಕಳಿಸಿದ ೨೦೦೦೦ ರೂಪಾಯಿ ಗಿಫ್ಟ್ ಚೆಕ್ಕಿನಿಂದಾನೇ ನಾವು, ಈ ಫರ್ನಿಚರ್ರು, ಆ ಕಾರು, ಆ ಟೂ ಇನ್ ಒನ್ನೂ ಎಲ್ಲಾ ತೊಗೊಂಡು ಇಷ್ಟು ಅನುಕೂಲ ಸ್ಥಿತಿಗೆ ಬಂದಿದೀವಿ.

**ಅಂ ವೆಂ:** ಅದೇ ನನಗೆ ಆಶ್ಚರ್ಯ! ನಾನು ಕಳಿಸಿದ್ದು ೨೦೦೦೦ ರೂಪಾಯಿನೋ ಅಥವಾ ತಪ್ಪಿ ೨ ಲಕ್ಷ ರೂಪಾಯಿನೋ ಅಂತ ಅದೇ ನನಗ ಆಶ್ಚರ್ಯ!

ಜನಾರ್ದನ ಹೆ..ಹೆ.. ಅದು ಹೇಗೆ ಚಿಕ್ಕಪ್ಪ ಸಾಧ್ಯ? ೨ ಲಕ್ಷ ಕಳಿಸಿದೆ ಅಂತ ಅದು ಹೇಗೆ ಅನ್ನಿಸುತ್ತೆ ನಿಮಗೆ?

**ಅಂ ವೆಂ:** ಅದಕ್ಕೇ ಹೇಳಿದ್ದು ಆಶ್ಚರ್ಯ ಅಂತ. ಈ ಮನೆ.. ಇಂಥಾ ಮನೆ.. ಸುಂದರವಾದ ಮನೆ.. ಇಂಥಾ ಬಡಾವಣೇಲಿ ಸಿಕ್ಕಬೇಕಾದರೆ ಬಾಡಿಗೆ ದುಬಾರಿ ಇರಬೇಕಲ್ಲವೇ?

ಜನಾರ್ದನ ಬಾಡಿಗೆ?!... ಹೆ... ಹೆ...ಹೆ... ನೀವು ತಪ್ಪು ತಿಳಿಕೊಂಡಿದ್ದೀರಾ ನಮ್ಮನ್ನ. ನಾನೀ ಮನೆಗೆ ಬಾಡಿಗೆ ಕೊಟ್ಟೇ ಇಲ್ಲ... ಕೊಡೋದೂ ಇಲ್ಲ.

**ಅಂ ವೆಂ:** ಕೊಟ್ಟೇ ಇಲ್ಲ ಅನ್ನೋದು ನಿಜ ಇರಬಹುದು. ಆದರೆ ಕೊಡೋದೇ ಇಲ್ಲ ಅಂದರೆ ಹೇಗಯ್ಯಾ? ಮಾಲಿಕ ಸಾಮಾನೆಲ್ಲಾ ತೆಗೆದು ಹೊರಗೆ ಬಿಸಾಕಿದರೆ, ನಿನ್ನ ಪಾಡೇನು?.. ಈ ನಿನ್ನ ಹೆಂಡತಿ ಪಾಡೇನು?.. ಹೋಗಲಿ. ಆ ಮಗು, ಆ ಪುಟ್ಟ ಕಂದನ ಬಗ್ಗೆ ಆದರೂ ಯೋಚಿಸಿದ್ದೀಯಾ?

ಜಲಜ ಹಾಗಲ್ಲ ಅಂಕಲ್. ನೀವು ಇವರು ಹೇಳಿದ್ದನ್ನ ತಪ್ಪು ಅರ್ಥ ಮಾಡಿಕೊಂಡಿದೀರ. ಅವರು ಹೇಳಿದ್ದು ಹಾಗಲ್ಲ.

**ಅಂ ವೆಂ:** ಅವರು ಹೇಳಿದ್ದು ಹಾಗಲ್ಲದಿದ್ದರೆ, ಅವರು ಹೇಳಿದ್ದು ಹೇಗೆ ಅಂತ ನೀನೇ ಹೇಳಮ್ಮ.

ಜಲಜ ಈ ಮನೆಗೆ ಬಾಡಿಗೆ ಕೊಡೋದೇ ಇಲ್ಲ ಅಂದರೆ ಅರ್ಥ... ಈ ಮನೆ ನಮ್ಮದೇ... ಅಂತ.

**ಅಂ ವೆಂ:** ನಿ..ಮ್ಮ..ದೇ...?

ಜನಾರ್ದನ ಹೌದು.. ನಮ್ಮದೇ... ಬರೀ ೨೦೦೦೦ ಕೊಟ್ಟರೆ ನಿಮ್ಮದೇ.

**ಅಂ ವೆಂ:** ಏನೋಪ್ಪಾ... ಗಂಡ ಹೆಂಡತಿ ಇಬ್ಬರೂ ಒಗಟು ಮಾತಾಡ್ತಾ ಇದ್ದೀರಾ.

ಜನಾರ್ದನ ಒಗಟೂ ಅಲ್ಲ ಜಿಗಟೂ ಅಲ್ಲ. ಇಲ್ಲಿ ಕೇಳಿ ಚಿಕ್ಕಪ್ಪ. ಈಗಿನ ಕಾಲದಲ್ಲಿ ಬಾಡಿಗೆ ಕೊಟ್ಟು ಬದುಕಕ್ಕಾಗತ್ತಾ? ಆಗಲ್ಲ ಅಲ್ಲವಾ?.. ಅದಕ್ಕೇ, ೨೦೦೦೦ ರೂಪಾಯಿ ಕೊಟ್ಟು ಸರ್ಕಾರದ ಯಾವುದೋ ಸ್ಕೀಂನಲ್ಲಿ ಈ ಮನೇನ ಅಲಾಟ್ ಮಾಡಿಸಿಕೊಂಡೆ. ಆಮೇಲೆ ತಿಂಗಳಿಗೊಂದಷ್ಟು ಅಂತ ಒಂದಷ್ಟು ಕಂತುಗಳು ಕಟ್ಟಿದರೆ ಕೇವಲ ೨೦ ವರ್ಷದಲ್ಲಿ ಸಾಮಾನ್ಯ ಬಾಡಿಗೆದಾರ ಆಗಬೇಕಾಗಿದ್ದೋನು ಶ್ರೀಮಾನ್ ಮಾಲೀಕ ಆಗಿಹೋಗ್ತಾನೆ.

**ಅಂ ವೆಂ:** ಸರಿ ಸರಿ ಸರಿ. ಅರ್ಥವಾಯಿತು ಬಿಡಪ್ಪ. ಇನ್ನು ಕೇ...ವಲ ೨೦ ವರ್ಷದಲ್ಲಿ ಈ ಮನೆ ನಿಮ್ಮದಾಗತ್ತೆ ಅನ್ನು.. ಅಂದ್ಹಾಗೆ ಜನಾ! ಆ ಹೊರಗೆ ಕಾರು ನಿಂತಿತ್ತಲ್ಲಾ!.. ಅದೂ ನಿನ್ನದೋ?

ಜನಾರ್ದನ ಹೌದು ಹೌದು ನಮ್ಮದೇ.

**ಅಂ ವೆಂ:** ಪೂರ್ತಿ ನಿಮ್ಮದೇ?

ಜನಾರ್ದನ ಪೂ...ರ್ತಿ... ಅಂದರೆ... ಪೂರ್ತಿ ಅಲ್ಲ... ಒಂದು ಸ್ವಲ್ಪ ಪೂರ್ತಿ.

**ಅಂ ವೆಂ:** ಎಷ್ಟು ಸ್ವಲ್ಪ ಪೂರ್ತಿ?

ಜನಾರ್ದನ ಒಂದು ಚಕ್ರ, ಸ್ಟೀರಿಂಗ್, ಆಮೇಲೆ ಡಿಕ್ಕಿ – ಇವಿಷ್ಟು, ಪೂರ್ತಿ ನಮ್ಮದೇ.

ಜಲಜ ಆದರೂ ಕೇವಲ ೨೦೦೦ ರೂಪಾಯಿ ಕಟ್ಟಿ, ಪೂರ್ತಿ ಕಾರು ಉಪಯೋಗಿಸ್ತಾ ಇದ್ದೀವಲ್ಲಾ?

**ಅಂ ವೆಂ:** ೨೦೦೦ ರೂಪಾಯಿ!!! ಹೂಂ... ನಂತರ ಸುಲಭ ಕಂತುಗಳಿರಬೇಕು.

ಜನಾರ್ದನ ಹೌದು.. ಕಂತುಗಳು.. ಸುಲಭ ಕಂತುಗಳು.

**ಅಂ ವೆಂ:** ಸರಿಯಪ್ಪ. ಆ ಟಿ.ವಿ.. ರಿಪೇರಿಗೆ ಹೋಗಿದೆ ಅಂದೆಯಲ್ಲಾ!

ಜನಾರ್ದನ ಅದೇ.. ಮೊನ್ನೆ ಹೋಗಿದ್ದು.

ಜಲಜ ನಾಡಿದ್ದು ಬಂದು ಬಿಡತ್ತಲ್ಲಾ...

**ಅಂ ವೆಂ:** ಹೂಂ.. ಹೂಂ... ಅದೇ. . ಅದೇ. .ಅದರಲ್ಲಿ ಕೇವಲ ಸ್ಟಾಂಡ್ ಮಾತ್ರ ನಿಮ್ಮದು ಅಂತ ಕಾಣುತ್ತೆ. ಅಲ್ಲವಾ?

ಜನಾರ್ದನ ಅಲ್ಲ.. ಇನ್ನೂ ಅಲ್ಲ.. ಆ ಟಿ.ವಿ. ಕವರ್ ಮಾತ್ರ ಪೂರ್ತಿ ನಮ್ಮದು.

ಜಲಜ ಮಿಕ್ಕಿದ್ದೆಲ್ಲಾ ಸುಲಭ ಕಂತುಗಳು ತೀರಿದ ಕೂ..ಡಲೆ ನಮ್ಮದಾಗತ್ತೆ.



**ಅಂ ವೆಂ:** ಮತ್ತೆ... ಆ ರೇಡಿಯೋ?. . .ಈ ಫರ್ನೀಚರ್‌ಊ..

ಜಲಜ ಅದೂ ಹಾಗೇ.. ಇದೂ ಹಾಗೆ. . ಅಂಕಲ್. .

**ಅಂ ವೆಂ:** ಸರಿ.. ಆ ಡೈನಿಂಗ್ ಟೇಬಲ್ ತೋರಿಸಿದೆಯಲ್ಲಾ?

ಜನಾರ್ದನ ಹೌದು. ಪೂ..ರ್ತಿ ಟೀಕು.. ಟೀಕ್‌ವುಡ್ಡು..

**ಅಂ ವೆಂ:** ಇರಲಿ.. ಇರಲಿ.. ಅದರಲ್ಲಿ ಎಡಗಾಲು ಮಾತ್ರ ನಿಮ್ಮದು ಅಂತ ಕಾಣುತ್ತೆ.

ಜನಾರ್ದನ ಇಲ್ಲ. ಬಲಗಾಲು ಮಾತ್ರ ನಮ್ಮದು.

**ಅಂ ವೆಂ:** ಸರಿ. ಈ ಎಲ್ಲಾ ಕಂತುಗಳಿಗೂ ತಿಂಗಳಿಗೆ ಎಷ್ಟು ಕಟ್ಟಬೇಕಾಗುತ್ತೆ ನೀನು?

ಜನಾರ್ದನ ಜಾಸ್ತಿ ಏನಿಲ್ಲ. ಎಲ್ಲಾ ಸೇರಿ ತಿಂಗಳಿಗೆ ಸುಮಾರು ೨೦೦೦೦ ರೂಪಾಯಿ ಕಟ್ಟಬೇಕಾಗುತ್ತೆ.

**ಅಂ ವೆಂ:** ಸರಿ. ನಿನಗೆ ಸಂಬಳ ಎಷ್ಟು ಬರುತ್ತೆ?

ಜನಾರ್ದನ ೧೫೦೦೦ ರೂಪಾಯಿ.

**ಅಂ ವೆಂ:** ಅದು ಹೇಗಯ್ಯ ಸಾಧ್ಯ? ೧೫೦೦೦ ರೂಪಾಯಿ ಸಂಬಳದಲ್ಲಿ ೨೦೦೦೦ ರೂಪಾಯಿ ಕಂತುಗಳು ಹೇಗೆ ಕಟ್ತೀಯಾ?.. ಮತ್ತೆ ಕೂಳಿಗೇನು ಮಾಡ್ತೀಯಾ?

ಜನಾರ್ದನ ಅದೇನೂ ಕಷ್ಟ ಇಲ್ಲ ಚಿಕ್ಕಪ್ಪ. . . ಈ ಕಂತುಗಳನ್ನ ಕಟ್ಟೋದಕ್ಕೆ ಬೇರೆ ಕಡೆಯಿಂದ ಸಾಲ ತರುತೀನಿ.

**ಅಂ ವೆಂ:** ಆ ಸಾಲ ಹೇಗೆ ತೀರಿಸ್ತೀಯಾ?

ಜನಾರ್ದನ ಕಂತಿನಲ್ಲಿ.

**ಅಂ ವೆಂ:** ಆಗೋಲ್ಲಪ್ಪಾ. . .ಆಗೋಲ್ಲ. . .ನನ್ನಿಂದ ಆಗೋಲ್ಲ. . . ಇನ್ನೊಂದು ನಿಮಿಷ ಇಲ್ಲಿದ್ದರೆ ನನಗೆ ಹುಚ್ಚೇ ಹಿಡಿಯೋಕೆ ಶುರು ಆಗುತ್ತೆ. . . ಅದೂ ಕಂತಿನಲ್ಲಿ.. . . ನಾನಿನ್ನು ಬರ್ತೀನಯ್ಯಾ. . . ಬರ್ತೇನಮ್ಮಾ. . ನಿಮ್ಮೀ ಕಂತುಗಳೆಲ್ಲಾ ತೀರಿ... ಈ ಮನೇಲಿರೋ ಸಮಸ್ತ ವಸ್ತುಗಳೂ ಪೂ...ರ್ತಿ ನಿಮ್ಮದಾದ ಮೇಲೆ, ಪತ್ರ ಬರಿ. . ಬದುಕಿದ್ರೆ.. ಬರ್ತೀನಿ.

ಜಲಜ ಹೋಗಲೇಬೇಕಾ ಅಂಕಲ್?

**ಅಂ ವೆಂ:** ಖಂಡಿತಾ ಹೋಗಲೇ ಬೇಕು.

ಜನಾರ್ದನ ಬನ್ನಿ ಚಿಕ್ಕಪ್ಪ. . ನನ್ನ ಕಾರಿನಲ್ಲಿ. . . ಬಸ್ ಸ್ಟಾಪ್ ತನಕ ಡ್ರಾಪ್ ಕೊಡ್ತೀನಿ.

**ಅಂ ವೆಂ:** ಏನು! ಬರೀ ಎರಡು ಚಕ್ರ, ಒಂದು ಸ್ಟೀರಿಂಗ್ ನಿಂದಾಗಿರೋ ಕಾರಿನಲ್ಲೀ? ಬೇಡಪ್ಪಾ ಬೇಡ. ನನ್ನ ಕಾಲಿಗೆ ಇನ್ನೂ ನಡಿಯೋ ಶಕ್ತಿ ಇದೆ. ಆಟೋ ಸ್ಟ್ಯಾಂಡ್‌ವರೆಗೂ ನಡಕೊಂಡು ಹೋಗಿ, ಅಲ್ಲಿಂದ ಆಟೋ ಮಾಡಿಕೊಂಡು ಹೋಗ್ತೀನ.

ಜಲಜ ಊಟ ಆದರೂ ಮಾಡಿಕೊಂಡು ಹೋಗಿ ಅಂಕಲ್.



**ಅಂ ವೆಂ:** [ವಾಪಸು ಬರುತ್ತಾ] ನೋಡಮ್ಮ ಜಲಜ!. . ನೋಡಯ್ಯ ಜನಾರ್ದನ.. ನಾನು ಮಾತಾಡೋದು ಒರಟಾಗಿದ್ದರೆ ಏನೂ ತಿಳಕೋಬೇಡಿ.. .ನೀವು ಬದುಕ್ತಾ ಇರೋ ರೀತಿ ನನಗೆ ಬಹಳ ಅವಮಾನ ಅನ್ನಿಸ್ತಾ ಇದೆ.. ನಾನಾಗಲೀ, ನಿಮ್ಮಪ್ಪನಾಗಲಿ, ಯಾವಾಗ ಏನು ತರಬೇಕಾದ್ರೂ "ಮೊದಲು ದುಡ್ಡು, ಆಮೇಲೆ ಮಾಲು". . ಆದರೆ. . ನೀನು ನೋಡಿದ್ರೆ. . .[ಚೀಲದಿಂದ ಏನೋ ತೆಗೆದು] ಹೂಂ... ತೊಗೊ.. ಮದುವೆ ಆದಾಗ ೨೦೦೦೦ ರೂಪಾಯಿ ಕೊಟ್ಟಿದ್ದೆ.. . ಈಗ ಇನ್ನೂ ಸ್ವಲ್ಪ ದುಡ್ಡು ಬರೆದಿದ್ದೀನಿ, ಈ ಚೆಕ್‌ನಲ್ಲಿ.. ಇದರಿಂದ ಯಾವುದಾದರೂ

'ಒಂದು' ವಸ್ತುವಾದರು 'ಪೂ..ರ್ತಿ' ನಿನ್ನದಾಗಿ ಮಾಡಿಕೊ.

ಜನಾರ್ದನ ಅಯ್ಯೋ! ಇದೆಲ್ಲಾ ಯಾಕೆ ಚಿಕ್ಕಪ್ಪ. . . ಸುಮ್ಮನೆ ತೊಂದರೆ.. .ನಮಗೇನು ಪರವಾಗಿಲ್ಲ. ಕಂತುಗಳಲ್ಲಿ ತೀರಿಸ್ಕೋತೀವಿ.

**ಅಂ ವೆಂ:** ಇರಲಿ. . .ಇರಲಿ. . .ಇಟ್ಟುಕೋ. . . ನಾನಿನ್ನು ಬರಲಾ?

ಜನಾರ್ದನ ಇರಿ. . . ಚಿಕ್ಕಪ್ಪ. . . ನಾನೂ. . ಆಟೋ ಸ್ಟ್ಯಾಂಡ್‌ವರೆಗೂ ಬರ್‍ತೀನಿ.

**ಅಂ ವೆಂ:** ಸರಿ. . ಬರ್‍ತೀನಮ್ಮಾ. . ಮಗು. . ಮಗೂನ. . ಚೆನ್ನಾಗಿ ನೋಡಿಕೋ.

[ಇಬ್ಬರೂ ಹೊರಡುವರು. ಜಲಜ ಚೆಕ್ ನೋಡಿ, "ಹಾಂ! ೫೦೦೦೦ ರೂಪಾಯಿ!" ಎಂದುಕೊಂಡು ಕೂಡಲೇ ಯಾರಿಗೋ ಒಂದು ಪತ್ರ ಬರೆದು, ಸೈಡ್‌ವಿಂಗ್‌ಗೆ ಹೋಗಿ – 'ಜವರಾ! ಈ ಕವರನ್ನ ಈಗಲೇ ಹೋಗಿ ಡಾ॥ ಶಿವಶಂಕರ್‌ಗೆ ಕೊಟ್ಟು ಬಾ. . ನಾನು ಆಮೇಲೆ ಮಾತಾಡ್ತೀನಿ ಅಂತ ಹೇಳು. '. ಒಳಗೆ ಹೋಗುವಳು. ಕೆಲವು ಸೆಕೆಂಡುಗಳ ನಂತರ ಜನಾರ್ದನ ಬರುವನು]

ಜನಾರ್ದನ ಜಲಜಾ. . . ಜಲಜಾ. . .

ಜಲಜ [ಬರುತ್ತಾ] ಏನೂಂದ್ರೆ. . . ಅಂಕಲ್ ಹೊರಟು ಹೋದ್ರಾ?

ಜನಾರ್ದನ ಹೂಂ.. ಇಲ್ಲೇ ಆಟೋ ಸಿಕ್ಕಿತು. . ಅಂದ ಹಾಗೆ ಜಲಜ! ಚಿಕ್ಕಪ್ಪ ಕೊಟ್ಟ ಚೆಕ್ ಎಷ್ಟು ರೂಪಾಯಿಂದು?

ಜಲಜ ೫೦೦೦೦ ರೂಪಾಯಿ.

ಜನಾರ್ದನ ೫೦೦೦೦ ರೂಪಾಯಿ! ಥ್ಯಾಂಕ್ ಯು ಚಿಕ್ಕಪ್ಪ.. ದೇವರೇ. ಆ ಟಿ.ವಿ.ದು, ಕಾರಿಂದು ಒಂದೆರಡು ಕಂತುಗಳು, ಎಲ್ಲಾ ಕಟ್ಟಿ, ಪೆಟ್ರೋಲ್ ಕೂಡ ಹಾಕಿಸಿಕೊಂಡು ಬರ್‍ತೀನಿ. . .ಎಲ್ಲಿ? ಕೊಡು.

ಜಲಜ ಅಯ್ಯೋ!. . ನಾನೀಗ ತಾನೇ ಆ ಚೆಕ್ಕನ್ನ ಬೇರೇದಕ್ಕೆ ಕೊಟ್ಟು ಕಳಿಸಿದೆನಲ್ಲಾ.

ಜನಾರ್ದನ ಬೇರೇದಕ್ಕೇ!. . ಬೇರೆ ಯಾವುದಕ್ಕೇ?. . ಯಾರಿಗೆ?

ಜಲಜ ಡಾ॥ ಶಿವಶಂಕರ್‌ಗೆ.

ಜನಾರ್ದನ ಓ!! ಡಾ॥ ಶಿವಶಂಕರ್ ನಮ್ಮ ಫ್ಯಾಮಿಲಿ ಡಾಕ್ಟರ್. ಅವರು ಇಷ್ಟು ಬೇಗ ಕಂತುಗಳನ್ನ ನಿರೀಕ್ಷೆ ಮಾಡಲ್ಲ. ಅವರ ಕಂತುಗಳನ್ನ ಕಟ್ಟೋ ಅಷ್ಟು ಅರ್ಜೆಂಟ್ ಏನಿತ್ತು ನಿನಗೆ?. . ಈಗ?

ಜಲಜ ನೋಡಿ, ನೋಡಿ ! ನೀವು ತಿರುಗಾ ನನ್ನ ಮೇಲೆ ಕೋಪಿಸ್ಕೋತಾ ಇದ್ದೀರಾ.

ಜನಾರ್ದನ ಇದು ಕೋಪ ಅಲ್ಲ, ಜಲಜ!. . . ಡಾ॥ ಶಿವಶಂಕರ್ ಕಂತನ್ನ ಕಟ್ಟೋ ಅಷ್ಟು ಅರ್ಜೆಂಟ್ ಏನಿತ್ತು ಈಗ ಅಂದೆ.

ಜಲಜ [ಸ್ವಲ್ಪ ಅಳುಮೋರೆಯಿಂದ] ಆದರೆ. . . ಆದರೆ. . . ನಾ..ನ..೦..ದು..ಕೊ..ಡೆ... ನಾ..ನ..೦..ದು..ಕೊ..ಡೆ...

ಜನಾರ್ದನ ಓಹ್! ನಾ..ನ..೦..ದು..ಕೊ..ಡೆ... ನಾ..ನ..೦..ದು..ಕೊ..ಡೆ... ನೀನು ಯಾವಾಗಲೂ ಏನಾದರೂ ಅಂದುಕೊಳ್ತಾನೇ ಇರ್‍ತೀಯಾ.. . ಸರಿ.. ಈವಾಗೇನಂದುಕೊಂಡೇ!?. . .

ಜಲಜ ನಾ..ನ..೦..ದು..ಕೊ..ಡೆ... ಈ ಒಂದು "ಕೊನೇ" ಕಂತಿನಿಂದ, ಆ ನಮ್ಮ ಮಗು, ಕಂದ, ಪಾಪು ಆದರೂ "ಪೂ...ರ್ತಿ" ನಮ್ಮದಾಗಲೀ ಅಂತ.

***(ಪ್ರಚೋದನೆ: ಒಂದು ಇಂಗ್ಲಿಷ್ ಪ್ರಹಸನ)***

# ಕುರಿಯ ಪ್ರಲಾಪ

•ನಂನಾಗ್ರಾಜ್

ನಿಮಗೆ ನಮ್ಮಿಂದ ಎಷ್ಟೊಂದೆಲ್ಲ ಉಪಯುಕ್ತ ವಸ್ತುಗಳು ಸಿಗುತ್ತಿವೆ ಶುದ್ಧ ಉಣ್ಣೆಯಿಂದ ನಿಟ್ ಮಾಡಿದ ಸ್ವೆಟರ್‌ಗಳು ನೋಡಲೂ ಅಂದ ಹಾಗೂ ತೀವ್ರ ಶೀತದಿಂದ ಬೆಚ್ಚಗಿಡುತ್ತವೆ ಅವು ಬೆಂಕಿ ನಿರೋಧಕ ಕೂಡ. ಇದಲ್ಲದೆ ಕಂಬಳಿಗಳು, ಶಾಲುಗಳು, ಗ್ಲೌಸ್, ಸಾಕ್ಸ್, ಕಾರ್ಪೆಟ್ಸ್‌ಗಳು ಹೀಗೆ ಹತ್ತಾರು ಹಲವಾರು. ಶೀತವಲಯಗಳಲ್ಲಿ ಇವೆಲ್ಲ ಇಲ್ಲದೆ ಜೀವಿಸುವುದೇ ಸಾಧ್ಯವಿಲ್ಲ ಮೇಲಾಗಿ ನಮ್ಮ ರುಚಿಕರವಾಸ ಮಾಂಸವನ್ನು ಸವಿಯುತ್ತಲೇ ಬಂದಿದ್ದೀರಿ

**ಏಕೆ ಬೆಬ್ಬೆಬ್ಬಾ ಎಂದು ನಮ್ಮ ಭಾಷೆಯಲ್ಲಿ ಹೇಳುತ್ತೀರಿ?**

ಇವಲ್ಲದೆ ಸೋಪ್, ಗ್ಲೂ, ರ್‍ಯಾಕೆಟ್, ಗಟ್ಸ್, ಕಾಸ್ಮೆಟಿಕ್ಸ್ ತರಹದ ಬಹಳಷ್ಟು ಉತ್ಪನ್ನಗಳಿಗೂ ಕೂಡ ನಮ್ಮ ಉಣ್ಣೆ ಮೂಲ ಸಾಮಾಗ್ರಿ.

ನಮ್ಮ ಉಣ್ಣೆಯಿಂದ ತಯಾರಾದ ಸ್ವೆಟರ್‌ಗಳು ಹೆಣ್ಣಿನ ಅಂಗಸೌಷ್ಟವವನ್ನು ಎತ್ತಿ ಸಾರುತ್ತವೆ. ಆಗಲೇ ಅಲ್ಲವೇ ನೀವು ಅಂತಹವರನ್ನು ಎವೆಯಿಕ್ಕದೇ ನೋಡ್ಕೊಂಡು ಜೊಲ್ಲು ಸುರಿಸ್ಕೊಳೋದು! ಹಲವು ಪ್ರಕರಣಗಳಲ್ಲಿ ನಿಮಗೆ ಅನ್ನಿಸಿರಲೂ ಸಾಧ್ಯ ಉಣ್ಣೆ ಕುರಿಯ ಮೇಲೆಯೇ ಚೆನ್ನಾಗಿ ಕಾಣುತ್ತಿತ್ತು ಎಂದು!

ನಮ್ಮ ಔಟ್ ಸೈಡ್ ಹಾಗೂ ಇನ್‌ಸೈಡ್‌ಗಳ ಸಂಪೂರ್ಣ ಲಾಭವನ್ನು ಪಡೆದು ನಮ್ಮನ್ನು ಇನ್‌ಸೈಡ್ ಔಟ್ ಪರಿಹಾಸ್ಯ ಮಾಡುತ್ತೀರಿ ಕಟುಕರು.

ನಮ್ಮನ್ನು ಮೊದ್ದುಗಳು ಎಂದು ಅಪಪ್ರಚಾರ ಮಾಡುವುದಕ್ಕೆ ಒಂದು ಕುಚೋದ್ಯ ಮಾಡುತ್ತೀರಿ. ನಮ್ಮ ಹಿಂಡು ಚಲಿಸುತ್ತಿರುವಾಗ ಹಾದಿಯ ಅತಿ ಕಿರಿದಾದ ಜಾಗದಲ್ಲಿ ಒಂದು ಕೋಲನ್ನು ನೆಲದಿಂದ ಸ್ವಲ್ಪ ಎತ್ತರಕ್ಕೆ ಹಿಡಿದು ಕೂರುತ್ತೀರಿ ಮೊದಲನೆಯ ಕುರಿ ಅದನ್ನು ಹಾರಿ ದಾಟುತ್ತದೆ ಎರಡನೆಯದು ಹಾಗೂ ಮೂರನೆಯದೂ ಕೂಡ. ನಾಲ್ಕನೆಯ ಕುರಿಯ ಸರದಿ ಬರುವುದರೊಳಗೆ ಸರಕ್ಕನೆ ಅಡ್ಡವಾಗಿದ್ದ ಕೋಲನ್ನು ಹಿಂತೆಗೆಯುತ್ತೀರಿ ಕೋಲು ಇಲ್ಲದಿದ್ದರೂ ಸಹ ನಾಲ್ಕನೆಯ ಕುರಿ ಹಾರಿ ನಡೆಯುತ್ತೆ. ಹಾಗೆಯೇ ಐದನೆಯ, ಆರನೆಯ....... ಎಂತಹ ಹುಚ್ಚು ಪ್ರಾಣಿ ಎಂದು ಕೇಕೆ ಹಾಕಿ ಹೊಟ್ಟೆ ಹುಣ್ಣಾಗುವಷ್ಟು ನಗುತ್ತೀರಿ. ವಾಸ್ತವಾಂಶದ ಅರಿವೇ ಇಲ್ಲ ನಿಮಗೆ ಲೀಡ್, ಫಾಲೋ ಆರ್ ಗೆಟ್ ಔಟ್ ಆಫ್ ದಿ ವೇ! ಎಂಬ ತತ್ವವನ್ನು ನೀವು ಕೇಳಿದ್ದಿರಿ ಅಂದ್ಕೋತೀನಿ. ಎಷ್ಟಾದರೂ ನೀವು ಬುದ್ಧಿಜೀವಿಗಳು (ಸ್ವಯಂ ಘೋಷಿತ!) ನಾವು ಆ ತತ್ವವನ್ನು ಅನುಸರಿಸುತ್ತೇವೆ ಅಷ್ಟೆ. ನಮ್ಮ ಮುಂದಾಳು ಕುರಿ ಏನು ಮಾಡುತ್ತದೆಯೋ ಅದನ್ನು ಅದರ ಹಿಂದಿನ ಕುರಿಗಳು ಅನುಸರಿಸುತ್ತವೆ ಅಷ್ಟೆ! ನಾವು ಮುಂದಾಳನ್ನು ಪ್ರಶ್ನಿಸುವುದಿಲ್ಲ ಇದೊಂದು ಕ್ರಮ, ಶಿಸ್ತು ಹಾಗೂ ಐಕಮತ್ಯ ಈ ಸೂಕ್ಷ್ಮಗಳೆಲ್ಲ ನಮಗೆ ಅರ್ಥವಾಗುವುದಿಲ್ಲ ಬಿಟ್ಹಾಕಿ.

**ಹರಕೆಯ ಕುರಿ:–**

ನಿಮ್ಮ ಆಸೆ ಆಕಾಂಕ್ಷೆಗಳ ಸಿದ್ಧಿಗಾಗಿ ನಮ್ಮನ್ನು ಬಲಿ ಕೊಡುವುದಾಗಿ ದೇವರಲ್ಲಿ ಹರಕೆ ಹೊತ್ತು ಕೊಳ್ಳುತ್ತೀರಿ. ಕಾರ್ಯಸಿದ್ಧಿಯಾದ ಮೇಲೆ ನಮ್ಮ ಹಣೆಗೆ ತಿಲಕ ಇಟ್ಟು (ಇದರಲ್ಲಿ ನೀವು ನಿಸ್ಸೀಮರಲ್ಲವೇ?) ಕೊರಳಿಗೆ ಹಾರ ಕೂಡ ಹಾಕಿ ರೆಪ್ಪೆ ಮಿಟುಕಿಸಿದೆ ಕಡಿಯುತ್ತೀರಿ. ಅಮಾಯಕ, ಅಸಹಾಯಕ, ಸರಳ ಹಾಗೂ ಸಾಧು ಜೀವಿಗಳಾದ ನಮ್ಮ ಕ್ರೂರ ವಧೆ. ನೀವು ಸಭ್ಯಸ್ತರು, ಸೃಜನ ಶೀಲರು ಹಾಗೂ ಸುಶಿಕ್ಷಿತರಲ್ಲವೇ? ಈ ಕಾರ್ಯ ಧರ್ಮ / ನ್ಯಾಯ ಸಮ್ಮತವೇ? ನಿಮ್ಮ ಈ ದುರ್ನಡತೆ ದೇವರಿಗೆ ಪ್ರಿಯವಾಗುತ್ತದೆಂದು ನಂಬುತ್ತೀರಿ!

**ಬ್ಲ್ಯಾಕ್ ಶೀಪ್**

ಬಿಳಿ ಕುರಿ ಮಂದೆಯಲ್ಲಿ ಒಂದು ಕುರಿಕುರಿ ಈ ತರಹದ ಎಡವಟ್ಟು ಯಾವ ಪ್ರಾಣಿ ಸಂಕುಲದಲ್ಲಿ ಅಥವಾ ಮಾನವ ಕುಲದಲ್ಲಿ ಆಗುವುದಿಲ್ಲ? ನಮ್ಮಲ್ಲಿ ಆಗುವುದನ್ನು ಮಾತ್ರ ಏಕೆ ಎತ್ತಿ ಸಾರುತ್ತೀರಿ? ನಿಮ್ಮಲ್ಲಿ ಎಡವಟ್ಟು ಆದಾಗ ಡಿಸೇಬಲ್ಡ್ ಅನ್ನುತ್ತೀದ್ದಿರಿ. ಸುಧಾರಿಸಿ, ಅದನ್ನು ಡಿಫರೆಂಟ್ಲೀ ಏಬಲ್ಡ್ ಅಂತಿದ್ರಿ. ಮುಂದುವರೆದು 'ಸ್ಪೆಶಲ್' ಅಂತ ಗುರುತಿಸುತ್ತಿದ್ದೀರಿ. ಈ ಸಹಾನುಭೂತಿಯನ್ನು ನಾವೂ ಅನುಮೋದಿಸುತ್ತೇವೆ. ದೈಹಿಕ ನ್ಯೂನತೆಗಳನ್ನು ಎತ್ತಿ ತೋರಿಸಿ ಪರಿಹಾಸ್ಯ ಮಾಡುವುದು ತುಂಬಾನೆ ಅನೈತಿಕ ಹಾಗೂ ನೀಚತನ. ದಯವಿಟ್ಟು ತಿದ್ದಿಕೊಳ್ಳಿ.



**ಕೌಂಟಿಂಗ್ ದಿ ಶೀಪ್**

ನಿದ್ರೆ ಬರಿಸಿಕೊಳ್ಳಲು ನೀವು ಒಂದು ದೊಡ್ಡ ಮೈದಾನ ಹಾಗೂ ಕುರಿಗಳ ಹಿಂಡೊಂದನ್ನು ಕಲ್ಪಿಸಿಕೊಂಡು ಅವುಗಳು ಒಂದೊಂದಾಗಿ ಬೇಲಿ ಹಾರುವುದನ್ನು ಎಣಿಕೆ ಮಾಡುತ್ತೀರ, ವ್ಹಾ. ನಿಮ್ಮ ಕ್ರೇಜಿ ಕಲ್ಪನೆಗಳಿಗೆ ಮಿತಿಯೇ ಇಲ್ಲ. ಅರ್ಥಾತ್ ಸಂಬಂಧವಿಲ್ಲ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಇತ್ತೀಚಿನ ಅಧ್ಯಯನದಲ್ಲಿ– ನೀವು ಕುರಿಗಳ ಎಣಿಕೆ ಮಾಡಿ ನಿದ್ರೆಗೆ ಜಾರುವ ಸಮಯ– ನೀವು ಎಣಿಕೆ ಮಾಡದೇ ನಿದ್ರೆಗೆ ಜಾರುವ ಸಮಯಕ್ಕಿಂತ ಜಾಸ್ತಿ ಎಂಬುದನ್ನು ಖಚಿತಪಡಿಸಿದೆ. ಪಾಪರೀ, ನೀವು ನಮ್ಮನ್ನು ಎಣಿಸುವುದನ್ನು ಬಿಟ್ಟು ಬಿಡಿ! ಹೇಗೂ ನಾವು ಆಟಕ್ಕುಂಟು ಲೆಖ್ಖಕ್ಕಿಲ್ಲ!

ಸಾಧು ಅಥವಾ ಸಂಕೋಚದ ಸ್ವಭಾವದವರನ್ನು ಶೀಪಿಶ್ ಎಂದು ಕರೆಯುತ್ತೀರಿ. ಆ ಸ್ವಭಾವ ನ್ಯೂನತೆಯಲ್ಲ ತಾನೆ? ನಮಗೆ ಬಿರುಸು ಚಟುವಟಿಕೆಗಳ ಅಗತ್ಯ ಇಲ್ಲ ಅಲ್ಲವೇ? ನಮ್ಮ ಕೆಲಸ ನಿಮಗೆ ಉಣ್ಣೆ ಹಾಗೂ ಮಾಂಸ ಕೊಡುವುದು ತಾನೆ? ಅದನ್ನು ನಿರಂತರವಾಗಿ ಮಾಡುತ್ತಿದ್ದೇವೆ ಹಾಗಾಗಿ ನಿಮ್ಮದೇನು ತಕರಾರು?

ನಮ್ಮ ಬಾಹ್ಯ ದೃಷ್ಠಿ ಅದ್ಭುತವಾಗಿದೆ. ನಾವು ಸುಮಾರು $360^0$ ವರೆಗೂ ನೋಡಬಲ್ಲೆವು ನಿಮ್ಮ ತರಹ ಒಂದು ಅಡಿ ಮುಂದೆ ಇರುವುದನ್ನು ನೋಡಲು ಸೋಡಾ ಬಾಟಲ್ ಹಾಕ್ಕೊಳ್ಳಬೇಕಾಗಿಲ್ಲ! ನಮ್ಮ ಹಿಂದೆ ಏನಾಗುತ್ತಿದೆಯೆಂದು ನಾವು ತಲೆ ತಿರುಗಿಸದೆಯೇ ನೋಡಬಲ್ಲೆವು. ಇದನ್ನು ಕೇಳಿ ನಿಮ್ಮ ತಲೆ ತಿರುಗುತ್ತಿದೆ ಅಲ್ಲವೇ?

ನೀವು ಅಂದು ಕೊಂಡಿರುವ ಹಾಗೆ ನಾವು ಮೊದ್ದುಗಳಲ್ಲ. ಸಾಧು ಹಾಗೂ ಸಂಕೋಚ ಸ್ವಭಾವದವರು. ನಾವು 50ರ ತನಕ ಮುಖಗಳನ್ನು ನೆನಪಿಟ್ಟುಕೊಳ್ಳಬಲ್ಲೆವು. ಅದೂ 2 ವರುಷದವರೆಗೆ. ಮಾನವರನ್ನು ಕೂಡ, ನೆನಪಿರಲಿ!

ಯಾವುದಾದರೂ ಪ್ರಶ್ನೆಗೆ ಉತ್ತರ ಗೊತ್ತಿಲ್ಲ ಎಂದರೆ ಸರಳವಾಗಿ 'ಗೊತ್ತಿಲ್ಲ' ಎಂದು ನಿಮ್ಮ ಭಾಷೆಯಲ್ಲೇ ಹೇಳುವುದು ತಾನೆ? ಏಕೆ ಬೆಬ್ಬೆಬ್ಬಾ ಎಂದು ನಮ್ಮ ಭಾಷೆಯಲ್ಲಿ ಹೇಳುತ್ತೀರಿ? ಕಿಚಾಯಿಸ್ತಿದೀರಿ ತಾನೆ?

ಸಾಕು ಸುಮ್ಮನೆ ಕೂರ್ರೀ!

---

## ರಾಮ್ ಹನಿಗಳು

– ಎನ್. ರಾಮ್

**ಲೈಫು**

ಸಾಫ್ಟ್‌ವೇರವನಿಗೆ ದಿನವಿಡಿ ಕೆಲಸ
ತಿಂಗಳುಗಟ್ಟಲೆ ಬಿಟ್ಟಿರಬಲ್ಲನು
ವೈಫು
ಒಂದೇ ನಿಮಿಷವು ತಡೆಯಲಾರನೋ
ವೈಫೈ ಇಲ್ಲದ ಲೈಫು

**ಪೊಳ್ಳುತನ**

ಪೊರಕೆಯ ಹಿಡಿದರೆ
ಆಗುವುದೇನು
ಸ್ವಚ್ಛ ಭಾರತ ಅಭಿಯಾನ
ಇನಿತೂ ಬೆಳೆಯದೆ ನಮ್ಮ ಸಂಸ್ಕೃತಿ
ನಮ್ಮ ದೇಶದ ಅಭಿಮಾನ

ಕಾಮನ್ ರೂಂ ಕಹಾನಿ

# ಧರ್ಮ ಸಂಕಟ

*** ಗಣೇಶ್ ಹೆಗ್ಗಡೆ**

ಎಂದಿನಂತೆ ನಮ್ಮ ಕಾಮನ್ ರೂಮು ಸಭೆಗಳಿಗೆ ಮಂದಸ್ಮಿತರಾಗಿ ಬರುತ್ತಿದ್ದ ರಾಯರು ಇಂದು ಮ್ಲಾನವದನರಾಗಿ ಅಧ್ಯಕ್ಷ ಪೀಠವನ್ನಲಂಕರಿಸಿದ್ದುದನ್ನು ಕಂಡು ನಮಗೆಲ್ಲಾ ಅಚ್ಚರಿಯಾಗಿ, 'ಎನಿ ಸೀರಿಯಸ್ ಪ್ರಾಬ್ಲಂ ಸರ್? ಎಂದು ಕೇಳಿದೆವು. ಹೌದೆಂಬಂತೆ ಗೋಣಾಡಿಸಿದ ರಾಯರು "ಯಾಕೊ ಬೆಳಿಗಿನಿಂದ ಒಂಥರಾ ಧರ್ಮ ಸಂಕಟದಲ್ಲಿ ಸಿಲುಕಿದ್ದೇನೆ. ಬೆಳಿಗ್ಗೆ ಆ ಘಟನೆ ಕಣ್ಣಾರೆ ಕಂಡಂದಿನಿಂದ ಯಾಕೋ ಕುವೆಂಪುರವರು ತುಂಬಾ ನೆನಪಿಗೆ ಬರ್ತಿದ್ದಾರೆ ಎಂದರು.

**ರಾಯರಿಗೆ ಕಾಡುತ್ತಿದ್ದ ಆ ಸಂಕಟವಾದರೂ ಯಾವುದು?**

'ಯಾವ ಘಟನೆ ಸರ್? ಎಂದು ಕುತೂಹಲಗೊಂಡು ಕೇಳಿದೆವು.

ರಾಯರು ಕಹಾನಿ ಪ್ರಾರಂಭಿಸಿದರು:

"ಇವತ್ತು ಬೆಳಿಗ್ಗೆ ಈ ಸಭೆಗೆ ಬರುವುದಕ್ಕೆ ಮುಂಚೆ ನಾನು ನಮ್ಮೂರಿನ ಪ್ರಸಿದ್ಧ ನಂಜುಂಡೇಶ್ವರನ ಗುಡಿಗೆ ಹೋಗಲೇಬೇಕಾದ ಅನಿವಾರ್ಯ ಪರಿಸ್ಥಿತಿ ಒದಗಿಬಂತು. ನಾಸ್ತಿಕನಾದ ನಾನು ಗುಡಿಗೇಕೆ ಹೊರಟೆ? ಎಂಬ ಪ್ರಶ್ನೆ ಈಗಾಗಲೆ ನಿಮ್ಮ ಮನಸ್ಸಿನಲ್ಲಿ ಎದ್ದಿರಲಿಕ್ಕೂ ಸಾಕು. ಇವತ್ತು ಯುಗಾದಿಯ ದಿನವಲ್ಲವೆ? ಮನೆಯಲ್ಲಿ ಹಾಸಿಗೆ ಹಿಡಿದು ಮಲಗಿರುವ ನನ್ನ ಧರ್ಮಪತ್ನಿ ಎಂದೂ ಹಾಗೆ ಕೇಳದವಳು 'ಇವತ್ತು ನನ್ನ ಪರವಾಗಿ ದೇವರ ದರ್ಶನ ಮಾಡಿ ಪ್ರಸಾದ ತಂದುಕೊಡುವುದಕ್ಕೆ ಆಗುತ್ಯೆ? ಎಂದು ಅಲವತ್ತು ಕೊಂಡಾಗ ಒಂಥರಾ ಧರ್ಮ ಸಂಕಟ ನನಗೆದುರಾಯಿತು. ಈ ವಿಷಯ ಹಾಗಿರಲಿ ದೇವಸ್ಥಾನದಲ್ಲಿ ಎಂಥಹ ಅಚ್ಚರಿ ಕಾದಿತ್ತು ಗೊತ್ತೆ?

"ಏನಾಯ್ತು ಸರ್?

ದೇವರ ದರ್ಶನಕ್ಕೆ ಈಶ್ವರ ಭಕ್ತರ ಮೂರು ಕ್ಯೂ ಇದ್ದುದು ಕಂಡು ಗೊಂದಲವೇ ಆಯ್ತು ನನಗೆ, ನಾನು ಎಲ್ಲಿ ನಿಲ್ಲಬೇಕೊ ತಿಳಿಯದಾಗಿ, ಅಲ್ಲೇ ನನ್ನಂತೆಯೆ ನಿಬ್ಬೆರಗಾಗಿ ನಿಂತಿದ್ದ ಭಕ್ತರೊಬ್ಬರನ್ನು ಕೇಳಲಾಗಿ ಅವರುತ್ತರ ಏನಿತ್ತು ಗೊತ್ತೆ? ರಾಯರು ಕುತೂಹಲ ಸೃಷ್ಟಿಸಿ ನಮ್ಮತ್ತ ನೋಡಿದರು.

"ಯಾಕೆ ಮೂರು ಕ್ಯೂ ಇತ್ತು ಸರ್? ಎಂದು ಉತ್ಸುಕರಾಗಿ ಕೇಳಿದೆವು.

ರಾಯರು ಕಹಾನಿ ಮುಂದುವರೆಸಿದರು:

"ನೆನ್ನೆಯವರೆಗೂ ಈ ಊರಿನ ಈಶ್ವರ ಭಕ್ತರು ದೇವನೊಬ್ಬ ನಾಮ ಹಲವು ಎಂಬ ಪ್ರಾಚೀನ ಸೈದ್ಧಾಂತಕ್ಕೆ ಜೋತುಬಿದ್ದು, ಯಾವ ಭೇದ ಭಾವವೂ ಇಲ್ಲದೆ, ಒಂದೇ ಕ್ಯೂನಲ್ಲಿ ನಿಂತು ದೇವರ ದರ್ಶನ ಪಡೆದು ಕೃತಾರ್ಥರಾಗುತ್ತಿದ್ದರಂತೆ. ಆದರೆ ಇತ್ತೀಚೆಗೆ ಹಠಾತ್ತನೆ ಘಟಿಸಿದ ಒಂದು ಬೆಳವಣಿಗೆಯಿಂದ ಅವರು ನಂಬಿದ್ದ ಧರ್ಮವೇ ಎರಡು ವಿಭಜನೆಗಳಾಗಿ ಭಕ್ತರ ಮನಸ್ಸೇ ಒಡೆದು ವಿಕೋಪಕ್ಕೆ ಹೋಗಿ, ಹೀಗೆ ದೇವರ ದರ್ಶನಕ್ಕೆ ಎರಡು ಕ್ಯೂಗಳು ಮಾಡಲೇಬೇಕಾದ ಅನಿವಾರ್ಯತೆ ಉಂಟಾಯಿತಂತೆ. ಈಗ

ದೇವನೊಬ್ಬ ಧರ್ಮ ಹಲವು ಎಂಬ ಕೂಗು ಈ ಭಕ್ತರು ನಂಬಿರುವ ಮತಗಳಲ್ಲಿ ಎದ್ದಿದೆಯಂತೆ. ಇದಕ್ಕೆ ಪರೋಕ್ಷವಾಗಿ ಆಳುವ ಸರ್ಕಾರದ ಬೆಂಬಲವೂ ದೊರೆತಿದೆಯಂತೆ."

"ವೆರಿಸ್ಯಾಡ್ ಟು ಹಿಯರ್ ಸರ್, ಅಂದ್ಹಾಗೆ ಅಲ್ಲಿ ಮೂರನೆಯ ಕ್ಯೂನು ಇತ್ತು ಅಂದಿರಿ, ಅರ್ಥವಾಗ್ಲಿಲ್ಲ."

"ಮೈ ಬಾಯ್ಸ್, ಆ ಮೂರನೆಯ ಕ್ಯೂ ನನ್ನಂಥಹ ಯಾವ ಪಂಥಕ್ಕೂ ಸೇರದ ಭಕ್ತರುಗಳಿಗೆ ಅರ್ಥಾತ್ ವಿಶ್ವಮಾನವ ಧರ್ಮದಲ್ಲಿ ನಂಬಿಕೆಯಿಟ್ಟ ಮಾನವತಾವಾದಿಗಳಿಗೆ. ಅದಕ್ಕೆ ನಾನು ಈ ಕಹಾನಿ ಆರಂಭಿಸುವುದಕ್ಕೆ ಮುಂಚೆ ಹೇಳಿದ್ದು....ಇಂದು ಯಾಕೊ ರಾಷ್ಟ್ರಕವಿ ಕುವೆಂಪುರವರು ತುಂಬಾ ನೆನಪಿಗೆ ಬರ್ತಿದ್ದಾರೆ ಅಂತಾ...."

"ಸರ್ ನನ್ನದೊಂದು ಡೌಟು, ನಮ್ಮ ಮದುವೆಯ ಸಂದರ್ಭಗಳಲ್ಲಿ ನಾವು ಸಪ್ತಪದಿ ತುಳಿಯುವಾಗ ಧರ್ಮಪತ್ನಿಯ ಕೈ ಹಿಡಿದು, ಧರ್ಮೇಚಾ ಅರ್ಥೇಚಾ ಕಾಮೇಚಾ... ನಾತಿಚರಾಮಿ... ಎಂದು ಮಾತು ಕೊಟ್ಟಿರುತ್ತೇವೆ. ಆದರೆ ಬದುಕಿನ ಈ ಮಾರ್ಗ ಮಧ್ಯದಲ್ಲಿ ನಮ್ಮ ಧರ್ಮವೇ ವಿಭಜನೆಗೊಂಡರೆ ನಮ್ಮ ಪ್ರತಿಜ್ಞೆ ಅರ್ಥ ಕಳೆದು ಕೊಳ್ಳುವುದಿಲ್ಲವೆ?"

"ಡೆಫನೆಟ್ಲಿ ಮೈ ಬಾಯ್, ಇನ್ನು ಮುಂದೆ ಸಪ್ತಪದಿ ತುಳಿಯುವಾಗ ವರ ಮಹಾಶಯ ಏಳು ಸುತ್ತಿನ ಬದಲಿಗೆ ಮೂರೂವರೆ ಸುತ್ತಿಗೇ ಶಾಸ್ತ್ರವನ್ನು ಮೊಟಕು ಗೊಳಿಸಬೇಕು. ಎರಡು ಮೂರು ದಶಕದ ನಂತರ ಅದೇ ಧರ್ಮದಲ್ಲಿ ಅಕಸ್ಮಾತ್ ಕಂಟಿನ್ಯೂ ಆದರೆ ಉಳಿದ ಮೂರೂವರೆ ಸುತ್ತನ್ನು, ಅದೇ ಹೆಂಡತಿಯ ಕೈ ಹಿಡಿದು ಸಪ್ತಪದಿ ಶಾಸನವನ್ನು ಸಂಪೂರ್ಣಗೊಳಿಸಬೇಕು."

"ಸರ್, ಅಕಸ್ಮಾತ್ ಈ ಘಟ್ಟದಲ್ಲಿ 'ಹೆಂಡತಿಯೇ ಚೇಂಜ್ ಆಗಿ ಹೋಗಿದ್ದರೆ? ಹೊಸ ಹೆಂಡತಿ ಬಂದಿದ್ದರೆ?"

"ಅಯ್ಯೊ ದಮ್ಮಯ್ಯ, ಇಂಥಹ ತರಲೆ ಪ್ರಶ್ನೆಗಳನ್ನು ಕೇಳಿ ದಯವಿಟ್ಟು ನನಗೆ ಹುಚ್ಚು ಹಿಡಿಸಬ್ಯಾಡಿ. ಈಗ್ಲೆ ಇಷ್ಟು ತಲೆ ಕೆಟ್ಟಿದೆ. ಎಲ್ಲಾದ್ರೂ ಓಡಿಹೋಗಿ ಮಠ ಸೇರಿಕೊಳ್ಳಲೆ? ಎಂಬ ಮತಿಭ್ರಾಂತಿ ಉಂಟಾಗ್ತಿದೆ. ಇದು ಎಲ್ಲಿಗೆ ಹೋಗಿ ಮುಟ್ಟುತ್ತೆ ಅಂತ ಭಯವೂ ಆಗ್ತಿದೆ."

"ಸ್ಸಾರಿ ಸರ್, ತಾವು ಭಯ ಎಂದಾಗ ಕುರುಕ್ಷೇತ್ರದ ಶ್ರೀ ಕೃಷ್ಣ ನೆನಪಿಗೆ ಬರ್ತಿದ್ದಾನೆ 'ಸ್ವಧರ್ಮೇ ನಿಧನಂಶ್ರೇಯಃ... ಪರಧರ್ಮೋ ಭಯಾವಹಃ' ಎಂದು ಆಗಲೆ ಗೀತೋಪದೇಶದಲ್ಲಿ ನಮ್ಮನ್ನು ಶ್ರೀಕೃಷ್ಣ ಎಚ್ಚರಿಸಿದ್ದಾನೆ. ಅಂದರೆ ಮುಂದಿನ ಕಲಿಯುಗದಲ್ಲಿ ಧರ್ಮ ವಿಭಜನೆಗಳ ಬಗ್ಗೆ ಅವನಿಗೂ ಆತಂಕವಿತ್ತೆ? ಮುನ್ಸೂಚನೆಯಿತ್ತೆ? ಎಂಬ ಸಂಶಯ ನನ್ನದು."

"ವೆರಿ ಟ್ರೂ ಮೈ ಬಾಯ್, ದಾರ್ಶನಿಕರು ಒಂದು ಕಾಲದಲ್ಲಿ 'ಧರ್ಮೋ ರಕ್ಷತಿ ರಕ್ಷಿತಃ' ಎಂದು ಉಪದೇಶ ಮಾಡಿದ್ದರು. ಇದು ಎಲ್ಲಾ ಕಾಲಕ್ಕೂ ಸಮಂಜಸವೆನ್ನುವ ಭ್ರಮೆಯಲ್ಲಿ ಇಷ್ಟು ದಿನ ನಾವೂ ಸಿಲುಕಿದ್ದೆವು. ಎಲ್ಲಿಲ್ಲದಿದ್ದರೂ ನ್ಯಾಯಾಲಯಗಳಲ್ಲಿ ಧರ್ಮ ದೇವತೆ ಖಂಡಿತಾ ನೆಲಸಿದ್ದಾಳೆ ಎಂಬ ಭದ್ರ ನಂಬಿಕೆಯ ಬುನಾದಿಯ ಮೇಲೆ ನಾವಿಷ್ಟು ದಿನ ನಿರಾಳವಾಗಿದ್ದೆವು. ಆದರೆ ನಮ್ಮ ದುರ್ದೈವ ನೋಡು, ಈಗ ಧರ್ಮಗಳೇ ವಿಭಜನೆಗೊಂಡು ಮಠಗಳ ಸ್ವಾಮಿಗಳೂ ಮತ್ತು ಅವರನ್ನೇ ನೆಚ್ಚಿಕೊಂಡಿರುವ

ಭಕ್ತ ಅನುಯಾಯಿಗಳೂ ಈಗ ರಸ್ತೆಗಿಳಿದು ಪರಸ್ಪರ ಹೊಡೆದಾಟಕ್ಕಿಳಿದಿದ್ದಾರೆ. ವಿಧಿಯಿಲ್ಲದೆ ಧರ್ಮಗಳೇ ಈಗ ಕೋರ್ಟಿನ ಕಟೆಕಟೆಯಲ್ಲಿ ನಿಲ್ಲುವ ದಾರುಣ ಪರಿಸ್ಥಿತಿ ಬಂದಿದೆ. ಕಾಲವೇ ಇಂಥಹ ಪೇಚಿನ ಸಮಸ್ಯೆಗಳನ್ನು ನಿರ್ಣಯಿಸಬೇಕು "

ಇದ್ದಕ್ಕಿದ್ದಂತೆ ಕಹಾನಿ ನಿಲ್ಲಿಸಿದ ರಾಯರು ನಮ್ಮ ಮುಖದಲ್ಲಿ ತೇಲಾಡುತ್ತಿದ್ದ ಆತಂಕದ ಛಾಯೆಯನ್ನು ಗಮನಿಸಿ, "ನಿಮಗೆಲ್ಲಾ ಜಾನ್ ಡಾಲ್ಟನ್ ಎಂಬ ಪರಮಾಣು ವಿಜ್ಞಾನಿ ಗೊತ್ತೆ? ಎಂದು ಪ್ರಶ್ನಿಸಿದರು.

"ಗೊತ್ತು ಸಾರ್, ಆ್ಯಟಂ ವಿಭಜನೆಯ ಬಗ್ಗೆ ಸಾಕಷ್ಟು ಪ್ರಯೋಗಗಳನ್ನು ಮಾಡಿದ ವಿಜ್ಞಾನಿ ಅವನು."

"ಆ್ಯಟಂ ವಿಭಜಿಸಿದರೆ ಫ್ಯೂಷನ್ ಆಗುತ್ತೆ. ಇದು ಸಮಾಜಕ್ಕೆ ಹಾನಿಕರ, ಅಂತೆಯೆ ಧರ್ಮವನ್ನು ನಾವು ವಿಭಜಿಸಿದರೆ ಕನ್‌ಫ್ಯೂಷನ್ ಆಗುತ್ತೆ. ಇದು ಸಮಾಜಕ್ಕೆ ಮತ್ತಷ್ಟು ಹಾನಿಕರ" ಎಂದರು ರಾಯರು.

ಇಲ್ಲಿಯವರೆಗೆ ಸ್ತಂಬೀಭೂತರಾಗಿ ಕುಳಿತಿದ್ದ ನಮ್ಮೊಳಗೆ ಒಂದು ವಿದ್ಯುತ್ ಸಂಚಾರವಾದಂತಾಗಿ ನಾವು ಮನಸ್ಸಿನಲ್ಲೇ ರಾಯರನ್ನು ಅಭಿನಂದಿಸಿದೆವು.

ಸಭೆ ಬರಖಾಸ್ತು ಮಾಡಿದ ರಾಯರು ಎಲ್ಲರತ್ತ ಕೈ ಮುಗಿದು, 'ಥರ್ಮೋ ರಕ್ಷತಿ ರಕ್ಷಿತಃ' ಎನ್ನುತ್ತಾ ಹೊರಡಲೆದ್ದರು. ರಾಯರ ಕೊನೆಯ ಸಂದೇಶದ ಬಗ್ಗೆ ತಲೆಕೆಡಿಸಿಕೊಂಡ ನಾವು ದಾರಿಯಲ್ಲಿ ರಾಯರನ್ನು ಕುರಿತು, "ಸರ್ ತಮ್ಮ ಕೊನೆಯ ಸಂದೇಶ ನಮಗೆ ತಲೆಬುಡ ಅರ್ಥ ಆಗ್ತಾಯಿಲ್ಲ"

ಎಂದು ಅಳಲನ್ನು ತೋಡಿಕೊಂಡೆವು. ಜತೆಗೆ ಥರ್ಮೋ ಎನ್ನುವ ಪದ ಸಂಸ್ಕೃತದಲ್ಲೇ ಇಲ್ಲವಲ್ಲ ಎಂಬ ಸಂದೇಹವನ್ನೂ ವ್ಯಕ್ತಪಡಿಸಿದೆವು.

ಆಗ ರಾಯರು ವಿಷಾದದ ನಗೆ ಬೀರಿ, "ಡಿಯರ್ ಬಾಯ್ಸ್, ಧರ್ಮದ ಬಗ್ಗೆ ಮತ್ತು ಈಚಿನ ಬೆಳವಣಿಗೆಗಳ ಬಗ್ಗೆ ನಾವು ತಲೆಕೆಡಿಸಿಕೊಂಡಷ್ಟೂ ನಮ್ಮ ಹೃದಯದಲ್ಲಿ ಜ್ವಾಲಾಮುಖಿ ಚಿಮ್ಮುವುದು ಖಚಿತ. ಧರ್ಮ ಯಾವತ್ತೂ ಮಾನವರಲ್ಲಿ ಲಾವಾರಸ ಉಕ್ಕಿಸಬಾರದು. ಬದಲಿಗೆ ಲವ್ ರಸ ಉಕ್ಕಿಸಬೇಕು. ಆಗಲೇ ಸಮಾಜ ಸಮಚಿತ್ತದಿಂದ ಇರುವುದು. ಉದ್ದೇಶ ಪೂರ್ವಕವಾಗಿಯೇ ನಾನು 'ಥರ್ಮೋ' ಎಂಬ ಆಂಗ್ಲ ಪದವನ್ನು ಬಳಸಿದೆ. ನನ್ನ ಚಿಂತನೆ ಥರ್ಮೋ ಎಂದರೆ ಗ್ಲೋಬಲ್ ವಾರ್ಮಿಂಗ್ ಬಗ್ಗೆ ನಿಮ್ಮನ್ನೆಲ್ಲಾ ಎಚ್ಚರಿಸುವುದಾಗಿತ್ತು. ಪ್ರಕೃತಿಗಿಂತಲೂ ಈ ಜಗತ್ತಿನಲ್ಲಿ ಒಂದು ದೊಡ್ಡ ಧರ್ಮವುಂಟೆ? ನದಿ, ಕೆರೆ, ವನಸಿರಿ, ವನ್ಯಪ್ರಾಣಿಗಳು ಇತ್ಯಾದಿಗಳನ್ನು ನಮ್ಮ ಮಕ್ಕಳು, ಮೊಮ್ಮಕ್ಕಳು ಮುಂದಿನ ದಿನಗಳಲ್ಲಿ ಪೇಂಟಿಂಗ್‌ನಲ್ಲಿ ಮಾತ್ರ ನೋಡಬೇಕೆ? ನಾವು ಸಾಲ ಮರೆತ ಮಲ್ಯನಂಥಹವರನ್ನು ಕುರಿತು ಕೊರಗುವ ಬದಲು ಸಾಲು ಮರದ ತಿಮ್ಮಕ್ಕನನ್ನು ಸ್ಮರಿಸುವುದು ಸೂಕ್ತವಲ್ಲವೆ?"

ರಾಯರ ಈ ನುಡಿಗಳು ನಮ್ಮ ಕಿವಿಗಳಲ್ಲಿ ಮರುಧ್ವನಿತವಾಗಿ ರಾಯರದು ಎಂತಹ ಹಿರಿಚಿಂತನೆ ಎನಿಸಿತು.